ತಿಂಗಳ ಪತ್ರಿಕೆ. ಫೆಬ್ರುವರಿ ೧೯೯೨

Feb 92

ಮಹಿಳಾ ಬಂಡಾಯ ಕಾವ್ಯದ
ಮಿತಿ ಮತ್ತು ಸಾಧ್ಯತೆಗಳು

ದಿಕ್ಕೆಟ್ಟ ಗೃಹ ಮಾತೆಯರು

ಬಿಚ್ಚಿಕೊಂಡಿವೆ ಹಚ್ಚೆ ಬಳ್ಳಿಗಳು

ಸ್ತ್ರೀ–ವಾದ ಮತ್ತು ಚಿತ್ರರಂಗ

ಮದ್ದು

ಮಾನಸ

ಸಂಪುಟ: ೫ ಸಂಚಿಕೆ: ೨

ಫೆಬ್ರವರಿ ೧೯೯೨


ಸಂಪಾದಕೀಯ ಮಂಡಳಿ:
ರಾಜೇಶ್ವರಿ ಎಚ್. ಎಸ್.,
ಚಂಪಾವತಿ ಎಚ್. ಸ್., ದು. ಸರಸ್ವತಿ,
ಸವಿತ ಎ., ಗೀತಾ ಜಿ. ಎಸ್., ಗಾಯಿತ್ರಿ ಎ.

ಸಲಹೆ—ಸಹಕಾರ
ಇಳಾವಿಜಯ

ವಿಳಾಸ "ಮಾನಸ ತಿಂಗಳ ಪತ್ರಿಕೆ"
ಪಂಚಾಯಿತಿ ರಸ್ತೆ
ಕಾಡುಗೋಡಿ (ಪೊ)
ಬೆಂಗಳೂರು—560067

ಬಿಡಿಪ್ರತಿ: 2 ರೂ.
ಸೂಚನೆ: ವಾರ್ಷಿಕ ಚಂದಾ: 20ರೂ.
ಆಜೀವ ಚಂದಾ: 250ರೂ.
ಒಂದು ವಿಶೇಷ ಸಂಚಿಕೆಯೊಂದಿಗೆ
ಒಟ್ಟು ಹನ್ನೊಂದು ಸಂಚಿಕೆಗಳು.
ಹಣವನ್ನು ಬ್ಯಾಂಕ್ ಡ್ರಾಫ್ಟ್, ಎಂ. ಓ.
ಮೂಲಕ ಸ್ವೀಕರಿಸಲಾಗುವುದು.

ಈ ಸಂಚಿಕೆಯಲ್ಲಿ.........



ಸಂಪಾದಕೀಯ

ಬೇರೆ ಊರಿಗೆ ಓದಲೆಂದು ಪ್ರಯಾಣಿಸುತ್ತಿದ್ದ ವಿದ್ಯಾರ್ಥಿನಿಯೊಬ್ಬಳು ತನ್ನಂತೆ ನಿತ್ಯವೂ ಪಯಣಿಸುತ್ತಿದ್ದ ವಿದ್ಯಾರ್ಥಿಗಳ ಚುಡಾಯಿಸುವಿಕೆಗೆ ಪ್ರತಿಭಟನೆ ವ್ಯಕ್ತಪಡಿಸಿದ್ದಕ್ಕೆ ಅವರು ಸಿಟ್ಟಿಗೆದ್ದು ಆಕೆಯನ್ನು ಬೆತ್ತಲೆಗೊಳಿಸಿ ಮೆರವಣಿಗೆ ಮಾಡಲೆತ್ನಿಸಿದರು. ಇದು ಧಾರವಾಡದ ವರದಿ.

ಇದ್ದ ಊರುಗಳಲ್ಲೇ ಕಾಲೇಜಿದ್ದರೂ ಹೆಣ್ಣು ಮಕ್ಕಳಿಗೆ ಓದುವ ಭಾಗ್ಯ ಒದಗಿ ಬರುವುದು ಅಪರೂಪ. ಹೆಚ್ಚಿನ ಹುಡುಗಿಯರು ಮನೆಯವರೊಡನೆ ವಾದ-ವಿವಾದ, ಹೋರಾಟ ನಡೆಸಿಯೇ ತಮ್ಮ ಓದುವ ಕೈಂಕರ್ಯಕ್ಕೆ ಹೊರಡಬೇಕಾಗುತ್ತದೆ. ಪಕ್ಕದ ಊರಿಗೋ, ಪಟ್ಟಣಕ್ಕೋ ಹುಡುಗಿಯರನ್ನು ಓದಲು ಕಳುಹಿಸಲು ಹಿರಿಯರು ಸುಲಭದಲ್ಲಿ ಒಪ್ಪರು. ಶಾಲೆ, ಕಾಲೇಜುಗಳಿಗೆ ಸೇರಿದ ಹೆಣ್ಣು ಮಕ್ಕಳು ಹೆಚ್ಚು ಕಡಿಮೆ ಎಲ್ಲರ ಆಸಕ್ತಿಯ ಕೇಂದ್ರವಾಗಿರುತ್ತಾರೆ. ಅಂದರೆ ಅವರ ಬುದ್ಧಿಶಕ್ತಿ, ವಿದ್ಯಾಪ್ರಗತಿ ಬಗ್ಗಗಲ್ಲ. ಅವರ ನಡೆನುಡಿ, ವೇಷ ಭೂಷಣದ ಮುಂದೆ ಇವೆಲ್ಲ ತೀರ ಅಲ್ಪ. ಆ ಹುಡುಗಿಯರು ತಿಳಿದೋ ತಿಳಿಯದೋ ಅಪರಾಧವೇನಾದರೂ ಮಾಡಿದರೆ ಅದರ ಬಿಸಿ ಉಳಿದ ಹುಡುಗಿಯರಿಗೆ ತಟ್ಟದೇ ಹೋಗದು. ಅವರ ಓದಿಗೂ ಅರ್ಧಚಂದ್ರವಾಗುವುದು ಹೊಸತಲ್ಲ. ಇದು ಇಂದಿಗೂ ಕಣ್ಣಿಗೆ ರಾಚುತ್ತಿರುವ ಸತ್ಯ. ಹೀಗಿರುವಾಗ ಧಾರವಾಡದ ಘಟನೆ ಬಾಣಲೆಯಿಂದ ಬೆಂಕಿಗೆ ಹಾಕಿದಂತಾಗಿದೆ.

ಚುಡಾಯಿಸುವಿಕೆಯೇ ದೊಡ್ಡಸ್ತಿಕೆ ಎಂದು ಭಾವಿಸಿದ ಆ ವಿದ್ಯಾರ್ಥಿಗಳು, ತಮ್ಮ ತಪ್ಪನ್ನು ಅರಿತುಕೊಳ್ಳದೇ ತಮಗೆ ಪ್ರತಿಭಟನೆ ತೋರಿದ್ದೇ ತಮ್ಮ ಪೌರುಷಕ್ಕೆ ಕಲಂಕ ಹತ್ತಿತೆಂದು ಆಕೆಯನ್ನು ಇನ್ನೂ ಅನಾಗರಿಕವಾಗಿ ನಡೆಸಿಕೊಂಡರು. ಈ ಕೃತ್ಯ ತಮ್ಮ ನೀಚತನ, ಅನೈತಿಕತೆಗಳಿಗೆ ಹಿಡಿದ ಕನ್ನಡಿ ಎಂಬಂಶ ಅವರ ಅರಿವಿಗೆ ಬರಲಿಲ್ಲವೆಂದು ತೋರುತ್ತದೆ.

ಈಗೀಗ ತಮಗಾಗದವರನ್ನು ಬೆತ್ತಲೆಗೊಳಿಸುವುದೇ ಮೌಲ್ಯ ಎಂದು ಭ್ರಮಿಸುವವರ ಸಂಖ್ಯೆ ಹೆಚ್ಚುತ್ತಿರುವುದರಿಂದ ಇಂಥ ಪ್ರಕರಣಗಳೂ ಹೆಚ್ಚುತ್ತಿವೆ. ಮೇಲಿನ ಘಟನೆ ವೈಯಕ್ತಿಕವಾಗಿ ಆ ವಿದ್ಯಾರ್ಥಿನಿಗೆ ತುಂಬಿಬಾರದ ನಷ್ಟ ಅಷ್ಟೇ ಅಲ್ಲ ಬೇರೆಡೆಗಳ ಇತರ ಹುಡುಗಿಯರಿಗೂ ಆಘಾತ ಒದಗುತ್ತದೆ. ಮಗಳ ವಿದ್ಯಾಭ್ಯಾಸದೆಡೆಗೆ ಇನ್ನೂ ಅರೆಮನಸ್ಸನ್ನೇ ಹೊಂದಿರುವ ಪೋಷಕರು ಮತ್ತೂ ಹಿಂಜರಿಯಬಹುದು. "ಚುಡಾಯಿಸುವಿಕೆ"ಯ ಫ್ಯಾಷನ್‌ಗೆ ತಮ್ಮನ್ನೇ ಅರ್ಪಿಸಿಕೊಂಡವರು ಈ ವಿದ್ಯಾರ್ಥಿಗಳ ನಡತೆಯನ್ನೇ ಆದರ್ಶವೆಂದು ತಿಳಿದರೂ ಹೆಚ್ಚಲ್ಲ. ಆದ್ದರಿಂದ ಈಗಲೇ ಇಂಥವನ್ನು ಕೊನೆಗಾಣಿಸಬೇಕು. ಅಪರಾಧಿಗಳಿಗೆ ಕಠಿಣ ಶಿಕ್ಷೆಯಾಗಬೇಕು. ಇಲ್ಲವಾದರೆ ನಮ್ಮ ಯುವ ಪೀಳಿಗೆ ಅನಾರೋಗ್ಯಕರ, ಅಮಾನವೀಯ ನಡತೆಗಳೇ ಸರಿಯಾದವು ಎಂದು ಭಾವಿಸಿಬಿಡುವ ಅಪಾಯವಿದೆ.

ಮಹಿಳಾ ಬಂಡಾಯ ಕಾವ್ಯದ ಮಿತಿ ಮತ್ತು ಸಾಧ್ಯತೆಗಳು

ವಿನಯಾ ನಾಯಕ.

ಮಹಿಳಾ ಬಂಡಾಯ ಕಾವ್ಯ ಒಟ್ಟೂ ಬಂಡಾಯ ಕಾವ್ಯದ ಅಂಗವಾಗಿಯೇ ಇರುವುದರಿಂದ ಮಹಿಳಾ ಕಾವ್ಯಕ್ಕೆ ಒಟ್ಟೂ ಬಂಡಾಯ ಕಾವ್ಯದ ಮಿತಿಗಳೂ ಉಂಟು, ವೈಯಕ್ತಿಕ ನೆಲೆಯಲ್ಲಿಯೂ ಮಿತಿಗಳುಂಟು. ವಸ್ತು ಮತ್ತು ಅಭಿವ್ಯಕ್ತಿಯ ಎರಡೂ ನಿಟ್ಟಿನಲ್ಲಿ ಚಾಚಿಕೊಂಡಿರುವ ಈ ಮಿತಿಗಳನ್ನು ಪರಿಶೀಲಿಸಬೇಕಾದದ್ದು ಅತ್ಯಗತ್ಯ. ಇಂಥ ಮಿತಿಗಳ ಒಡಲಲ್ಲಿಯೇ ಹೊಸ ಸಾಧ್ಯತೆಗಳ ಸುಳಿವನ್ನೂ ಗುರುತಿಸಬಹುದು,

ಮೇಲ್ವರ್ಗದ, ಮೇಲ್ಜಾತಿಯ ಶೋಷಕರನ್ನು ಶೋಷಕ ವ್ಯವಸ್ಥೆಯನ್ನು ರೊಚ್ಚು, ಆಕ್ರೋಶ, ಕೋಲಾಹಲಗಳಿಂದ ತುಂಬಿದ ಭಾಷೆಯಲ್ಲಿ ಕವಿಗಳು ಪ್ರತಿಭಟಿಸುವಷ್ಟರಮಟ್ಟಿಗೆ ತಮ್ಮ ಕಾವ್ಯ ವಸ್ತುವನ್ನು ಸೀಮಿತಗೊಳಿಸಿಕೊಂಡಂತೆ, ಬಹುತೇಕ ಕವಿಯಿತ್ರಿಯರು ಪುರುಷ ವಿರೋಧಿ ಆಕ್ರೋಶಕ್ಕೆ ಹೆಚ್ಚಿನ ಒತ್ತು ಕೊಟ್ಟರು. ಬಂಡಾಯ ಕಾವ್ಯ ಹತ್ತು ಹನ್ನೆರಡು ವರುಷಗಳ ನಂತರವೂ ಮುಂದುವರಿಸುತ್ತಿರುವ ಏಕತಾನತೆಗೆ ಕವಿಯಿತ್ರಿಯರೂ ತಮ್ಮ ನೆಲೆಯಿಂದಲೇ ಕಾಣಿಕೆ ಸಲ್ಲಿಸುತ್ತಿದ್ದಾರೆ. ಈ ಏಕತಾನತೆಯಿಂದ ಬಂಡಾಯ ಕಾವ್ಯ ಹೊರಬರಬೇಕಿದೆ. ಅಂದರೆ ವಸ್ತುವನ್ನು ತಿರಸ್ಕರಿಸಬೇಕೆಂದಲ್ಲ. ವಸ್ತು ಅದೇ ಆದರೂ ಹೇಳುವ ರೀತಿಯಲ್ಲಿ ಸಾಧಿಸಿಕೊಳ್ಳುವ ಹೊಸತನದಿಂದ ಅರ್ಥದ ಮಗ್ಗುಲುಗಳನ್ನು ವಿಸ್ತರಿಸುತ್ತಾ, ವಸ್ತುವಿಗೂ ಹೊಸ ಸ್ಪರ್ಶವನ್ನು ನೀಡಬಹುದು. ಆ ನಿಟ್ಟಿನಲ್ಲಿ ನಮ್ಮ ಕವಿಯಿತ್ರಿಯರು ಹೆಚ್ಚಿನ ಗಮನ ಪೂರೈಸಬೇಕಿದೆ.

ಕಲಾತ್ಮಕವಾಗಿ ಸಾಕಷ್ಟು ಯಶಸ್ಸನ್ನು ಗಳಿಸಿದ ಕೆಲ ಕವಿಯಿತ್ರಿಯರು ಭೂತ ಕಾಲದ ಶೋಷಕ ಪರಂಪರೆಯನ್ನು ಗುರುತಿಸುತ್ತ, ವರ್ತಮಾನದ ದುಃಸ್ಥಿತಿಗಾಗಿ ನೋಯುತ್ತಾರೆ. ಮರುಗುತ್ತಾರೆ, ಪ್ರತಿಭಟಿಸುತ್ತಾರೆ. ಆದರೆ ಬಂಡಾಯ ಕವಿಗಳಿಗೆ ತಾವು ಕಟ್ಟಬೇಕಾದ ಹೊಸ ಸಮಾಜದ ಸ್ಪಷ್ಟ ಪರಿಕಲ್ಪನೆಯಿರುವಂತೆ ಕವಿಯಿತ್ರಿಯರಿಗೆ ಇಂದಿನ ವ್ಯವಸ್ಥೆಯ ಬದಲಾಗಿ ಎಂಥದನ್ನು ಬಯಸುತ್ತೇವೆಂಬುದರ ಬಗ್ಗೆ ಗಟ್ಟಿ ವೈಚಾರಿಕ ತಳಹದಿ ಇಲ್ಲ. ಹೀಗಾಗಿ, ಪುರುಷ ವಿರೋಧಿ ಕ್ಲಿಷೆಯನ್ನು ಮೀರಿಯೂ ಸಾಧಿಸಬಹುದಾದ ಕನಸುಗಾರಿಕೆಯಿಂದ ಕಾವ್ಯ ವಂಚಿತವಾಗಿದೆ,

ಪರಿಸರದ ಕೂಸಾದ ಮಾನವನನ್ನು ಬದಲಿಸಬೇಕೆಂದರೆ ಅವನ ಸಮಗ್ರ ಪರಿಸರವನ್ನೇ ಬದಲಿಸಬೇಕೆಂದು ಹೇಳಿ ಮಾರ್ಕ್ಸ್ ಸಾಹಿತ್ಯಿಕ ದೃಷ್ಟಿಕೋನಗಳಿಗೆ ಸಮಾಜವಾದಿ ವಾಸ್ತವವನ್ನು ಕಲ್ಪಿಸಿಕೊಟ್ಟ ಭಾರತದ ಮಟ್ಟಿಗೆ ಇಂಥ ಸಮಗ್ರ ಪರಿಸರವಿರುವುದು ಹಳ್ಳಿಗಳಲ್ಲಿ ಅಜ್ಞಾನ, ಅಂಧಕಾರಗಳಿಂದ ತುಂಬಿ ತುಳುಕುವ ಸ್ಥಾಪಿತ ಪ್ರಜ್ಞೆ ಗ್ರಾಮೀಣ ಭಾರತದ ಸೊತ್ತು ಹೀಗಾಗಿ ಈ ಅನಕ್ಷರಸ್ಥ ಸಮೂಹದ ಅಜಾಗೃತ ಮನಸ್ಸನ್ನು, ಸಂವೇದನೆಗಳನ್ನು ಸ್ವೀಕರಿಸಿದಷ್ಟೂ ಬಂಡಾಯದ ಉದ್ದೇಶಕ್ಕೆ ಹೆಚ್ಚು ಪೂರಕ. ಆದರೆ ಗದ್ಯದಲ್ಲಿ ಬಂದಷ್ಟು ಗ್ರಾಮೀಣ ಸಂವೇದನೆಗಳು ಕಾವ್ಯದಲ್ಲಿ ಬಂದಿಲ್ಲ. ಹಾಗೇ ಗ್ರಾಮೀಣ ಪ್ರಜ್ಞೆ ನಮ್ಮ ಬಹುಪಾಲು ಕವಿಯಿತ್ರಿಯರ ಸ್ಥಾಯಿಯಾಗಲೇ ಇಲ್ಲ.

ಮಹಿಳಾ ಕಾವ್ಯದ ಮಟ್ಟಿಗೆ ಹಳ್ಳಿಯ ಹೆಣ್ಣು ತನ್ನ ಸಮಸ್ಯೆ ಸಂವೇದನೆಗಳ ಜತೆಯಲ್ಲಿಯೇ ಅಸ್ಪೃಶ್ಯಳಾಗಿದ್ದಾಳೆ. ಜನಪದ ನಂಬಿಕೆಗಳು ಹೆಣ್ಣನ ಬಗೆಗಿನ ತಿರಸ್ಕಾರವನ್ನು ಸಹಜವಾಗಿ ಒಪ್ಪಿಕೊಳ್ಳುವ ಮೌಢ್ಯ ಜನಪದ ಪ್ರಜ್ಞೆಯಲ್ಲಿ ಆಳವಾಗಿ ಬೇರೂರಿದೆ.

"ಬಳೆ ತೊಟ್ಟುಕೊ" "ಸೀರೆ ಉಟ್ಟುಕೊ" ಎಂಬುದು ಗಂಡಸನ್ನು ಬಯ್ಯುವ ಪದಗಳಾಗಿವೆ, "ಹೆಂಗಸಿನ ಬುದ್ಧಿ ಮೊಳಕಾಲ ಕೆಳಗೆ" ಎಂಬ ತುಚ್ಛೀಕರಣ ಗಾದೆಯು ಮಾತಾಗಿದೆ. ಜನಪದ ಬದುಕಿನಲ್ಲಿ ಸ್ತ್ರೀಯನ್ನು ಗುಲಾಮಗಿರಿಗೆ ಒಗ್ಗಿಸಿಕೊಂಡ ಕ್ರೌರ್ಯ ಹೆಜ್ಜೆ ಹೆಜ್ಜೆಗೂ ಕಾಣುತ್ತಿದೆ. ಇಂಥ ಮೌಢ್ಯತೆಯ ಅಂಧಕಾರದಲ್ಲಿ ಅರಿವಿನ ದೀಪ ಹಚ್ಚಬೇಕಿದೆ. ಗಂಡಸಿನ ಕುಡಿತ ಸೂಳೆಗಾರಿಕೆಗಳು ಅವನ ಪ್ರತಿಷ್ಠೆಯ ಸಂಕೇತಗಳಾದರೆ; ವಿದ್ಯಾವಂತ ಹೆಣ್ಣಿನ ಸ್ವಾತಂತ್ರ್ಯಪ್ರಿಯತೆ ಕೂಡ ಗಂಡುಬೀರಿತನ ಸೋಗಲಾಡಿತನಗಳಾಗಿ ಗೋಚರಿಸುತ್ತವೆ. ಶ್ರೀಮಂತರ ಕಾಮುಕ ಬಾಹುಗಳಿಗೆ ಬಡ ಹೆಣ್ಣಿನ ಶೀಲವನ್ನು ಬಲಿಕೊಡುವ ದುರಂತ ಇಂದಿಗೂ ಮುಂದುವರಿಯುತ್ತಿದೆ. ಇಂಥ ವಿಷಯಗಳು ನಮ್ಮ ಕವಿಯಿತ್ರಿಯರನ್ನು ತಟ್ಟಿದ್ದು ಬಹಳ ಕಡಿಮೆ. ಕವಿಯಿತ್ರಿಯರಲ್ಲಿ ಬಹುಸಂಖ್ಯಾತರು ನಗರದ ಮಧ್ಯಮ ವರ್ಗದಿಂದ ಬಂದದ್ದೇ ಇದಕ್ಕೆ ಕಾರಣವಾಗಿರಬಹುದು. ಜಾನಪದ ಬದುಕು ವಸ್ತು, ವಿನ್ಯಾಸ ಎರಡೂ ದೃಷ್ಟಿಯಿಂದ ಅಕ್ಷಯನಿಧಿ ಇದನ್ನು ಸಮರ್ಪಕವಾಗಿ ದುಡಿಸಿ–ಮಣಿಸಿಕೊಳ್ಳುವ ಜವಾಬ್ದಾರಿ ಮುಂದಿನ ಕವಿಯಿತ್ರಿಯರ ಮೇಲಿದೆ.

ಬಂಡಾಯ ಕವಿಗಳು ತಮ್ಮ ವಸ್ತುವಿಗೆ ಅಭಿವ್ಯಕ್ತಿ ನೀಡಲು ಆರಿಸಿಕೊಂಡಿದ್ದು ನವೋದಯ ಸಂದರ್ಭದ ಭಾವಗೀತೆಯ ಲಯಗಳನ್ನು. ತ್ರಿಪದಿ, ಸಾಂಗತ್ಯ ಷಟ್ಪದಿ ಮುಂತಾದ ಮಟ್ಟುಗಳನ್ನು ಮುರಿದು ಕಟ್ಟಿ ಹೊಸ ಲಯಗಳನ್ನು ನವೋದಯ ಕವಿಗಳು ಸೃಷ್ಟಿಸಿದರೆ, ಆ ನಿಟ್ಟಿನಲ್ಲಿ ಬಂಡಾಯ ಕವಿಗಳ ಸಾಧನೆ ಸಮಾಧಾನಕರವಾಗಿಲ್ಲ. ಸಿದ್ಧಲಿಂಗಯ್ಯನಂಥವರು ಕೆಲವು ಪ್ರಯೋಗಗಳನ್ನು ಮಾಡಿದರೂ, ಎಲ್ಲರೂ (ಅಷ್ಟೇ ಏಕೆ ಸ್ವತಃ ಸಿದ್ಧಲಿಂಗಯ್ಯನವರೂ) ಅವುಗಳನ್ನೇ ಅನುಕರಿಸಿದರು. ಕವಿಯಿತ್ರಿಯರು ಹಾಡುಗಳನ್ನು ಬರೆದದ್ದೇ ಕಡಿಮೆ, ಬರೆದ ಹಾಡುಗಳೂ ಪ್ರೀತಿ–ಪ್ರೇಮ–ಕಾಮಗಳನ್ನು ಕುರಿತದ್ದೇ ಹೆಚ್ಚು. ಅಲ್ಲಲ್ಲಿ ಬಂಡಾಯದ ಆಶಯ ಹೊತ್ತ ಕೆಲ ಹಾಡುಗಳು ಬಂದಿದ್ದರೂ ಅವುಗಳ ಸಂಖ್ಯೆ ಹೇಳಿಕೊಳ್ಳುವಂಥದ್ದೇನಲ್ಲ. ಜಾನಪದ ಜೀವನವನ್ನು ಕಾವ್ಯಕ್ಕೆ ವಸ್ತುವಾಗಿ ಸ್ವೀಕರಿಸುವಲ್ಲಿಯ ಉದಾಸೀನತೆಯಿಂದಾಗಿಯೇ ಜಾನಪದ ಮಟ್ಟುಗಳನ್ನು ಅವುಗಳ ಲಯಗಳನ್ನು ಸಮರ್ಥವಾಗಿ ದುಡಿಸಿಕೊಳ್ಳಲು ಸಾಧ್ಯವಾಗದೆ ಹೋಯ್ತು. ಕವಿಯಿತ್ರಿಯರಿಗಂತೂ ಸಮೃದ್ಧ ಅವಕಾಶವಿರುವ ಕ್ಷೇತ್ರವಿದು. ಗ್ರಾಮೀಣ ಬದುಕಿನ ಕ್ರಿಯಾತ್ಮಕತೆಯಲ್ಲಿ ತಾನೇ ತಾನಾಗಿ ತುಂಬಿರುವ ಲಯ ವೈವಿಧ್ಯತೆಗಳಿಗೆ ನಮ್ಮ ಕವಿಯಿತ್ರಿಯರು ಸ್ಪಂದಿಸಿದ್ದು ಬೆರಳೆಣಿಕೆಯಷ್ಟು. ಜಾನಪದ ವಸ್ತು–ಜಾನಪದ ಭಾಷೆಯನ್ನು ದುಡಿಸಿಕೊಳ್ಳುವುದು ಇಂದಿನ ಸಾಹಿತ್ಯದ ಅಗತ್ಯವಾಗಿದೆ. ಗ್ರಾಮೀಣ ಭಾಷೆಯ ಸತ್ವವನ್ನು ಅದರೆಲ್ಲ ಧಾಡಸೀತನದೊಂದಿಗೆ ಒಗ್ಗಿಸಿಕೊಂಡರೆ, ಸಿದ್ಧ ಜಾನಪದ ಸಲಕರಣೆಗಳನ್ನು ದುಡಿಸಿಕೊಂಡರೆ ಸಂವಹನದ ಸಾಧ್ಯತೆ ಅಧಿಕವಾಗುತ್ತದೆ. ಅಲ್ಲದೇ ತಾಂತ್ರಿಕ ಬೆಳವಣಿಗೆಯಿಂದಾಗಿ ಇಂದು ಯಾರೂ ಕುಟ್ಟುವುದಿಲ್ಲ, ಬೀಸುವುದಿಲ್ಲ, ಜೊತೆಗೆ ಹಾಡುವುದೂ ಇಲ್ಲ. ಜಾನಪದ ಮಟ್ಟುಗಳ ಲಯಗಳು ಜನಮನದಿಂದ ಮರೆಯಾಗುತ್ತಿವೆ. ಹೀಗಾಗಿ ಅವುಗಳನ್ನು ಸಂಗ್ರಹಿಸಿದಂತೆಯೂ ಆಗುತ್ತದೆ. ಈ ಅಂಶಗಳನ್ನು ಒಗ್ಗೂಡಿಸಿಕೊಂಡರೆ ಮಹಿಳಾ ಕಾವ್ಯ ಹೆಚ್ಚು ಸತ್ವಪೂರ್ಣವಾದೀತು. ನವೋದಯದಲ್ಲಿ ಬೇಂದ್ರೆ, ನವ್ಯದಲ್ಲಿ ಕಂಬಾರ ಜಾನಪದ ವಸ್ತು ಮತ್ತು ಲಯಗಳನ್ನು ಸೃಜನಾತ್ಮಕವಾಗಿ ದುಡಿಸಿಕೊಂಡಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಹಾಗೆಯೇ ತಾಂತ್ರಿಕ ಬೆಳವಣಿಗೆಯಿಂದ ಸೃಷ್ಟಿಯಾಗಿರುವ ಉದ್ಯೋಗಸ್ಥ ಮಹಿಳೆಯ ಸಮಸ್ಯೆ–ಸಂವೇದನೆಗಳು ಕೇವಲ ಜನಪ್ರಿಯ ಸಾಹಿತ್ಯಕ್ಕೆ ಮಾತ್ರ ವಸ್ತುವಾಗಿದ್ದು, ಅವುಗಳನ್ನೂ ಕಾವ್ಯದ ತೆಕ್ಕೆಗೆ ಸ್ವೀಕರಿಸಬೇಕಾದ ಅನಿವಾರ್ಯತೆಯಿದೆ.

ಸೀತೆ, ದ್ರೌಪದಿ, ಅಮೃತಮತಿ, ಅಕ್ಕಮಹಾದೇವಿ, ಅಹಲ್ಯೆ ಮೊದಲಾದ ಪೌರಾಣಿಕ, ಐತಿಹಾಸಿಕ ಪಾತ್ರಗಳ ಮಾನಸಿಕ ಒಳತೋಟಿಯನ್ನು ಬಿಚ್ಚಿಡುವಲ್ಲಿ ಯಶಸ್ವಿಯಾದ ಕವಿತೆಗಳು ಬೆರಳೆಣಿಕೆಯಷ್ಟು. ಅಂದಿನಿಂದಲೂ ಇದೊಂದು ಕ್ಲೀಷೆಯಾಗಿ ಮುಂದುವರಿದಿದೆ. ಇಂಥ ಪಾತ್ರಗಳನ್ನು ಕಾವ್ಯಕ್ಕೆ ಸ್ವೀಕರಿಸಿದಾಗ ಕವಿಯಿತ್ರಿಯರಿಗೆ ತಮ್ಮ ಅನಿಸಿಕೆಗಳು ಮುಖ್ಯವಾಗಿವೆಯೇ ಹೊರತೂ ಪಾತ್ರಗಳ ವಾಸ್ತವ ಅಲ್ಲ. ಬೇರೆ ಕವಿತೆಯಲ್ಲಿ, ಬೇರೆ ರೀತಿಯಲ್ಲಿ ಹೇಳಬಹುದಾದ್ದನ್ನೇ ಇಂಥಲ್ಲಿಯೂ ಹೇಳಿದ್ದಾರೆ. ಪರಂಪರೆಯ ಇಂಥ

ಪಾತ್ರಗಳ ಮನಸ್ಥಿತಿ ಮತ್ತು ಕವಿಯಿತ್ರಿಯರ ಮನಸ್ಥಿತಿಗಳ ಮಧ್ಯೆ ಸಾಮರಸ್ಯ ಸಿದ್ಧವಾಗಿದ್ದುದು ಕೆಲವು ಕವಿತೆಗಳಲ್ಲಿ ಮಾತ್ರ.

"ಬಂಡಾಯ ಕಾವ್ಯ ಐತಿಹಾಸಿಕವಾಗಿ ಹುಟ್ಟಿದ್ದು ವಿಪ್ಲವ ವಾತಾವರಣದಲ್ಲಿ. ಭೂಗತರಾಗಿ ಜೇಲಿನಲ್ಲಿ ಕೂತು, ಮುಳ್ಳುಬೇಲಿಯ ಶಿಬಿರಗಳಲ್ಲಿ ದುಡಿಯುತ್ತ, ಸಿಡಿಮದ್ದಿನ ವಾಸನೆ ದಟ್ಟೈಸಿದಲ್ಲಿ ಸುತ್ತಲೂ ನೆತ್ತರು ಬಸಿಯುವಲ್ಲಿ ಬಾಂಬರುಗಳ ನೆರಳಿನಲ್ಲಿ. ಟ್ರೆಂಚುಗಳ ನರಳಿಕೆಯಲ್ಲಿ. ಬಂಡಾಯ ಕವಿ ನಿರ್ವಾಸಿತನೋ, ನಿರಾಶ್ರಿತನೋ, ಪರಾರಿಯೋ, ಯುದ್ಧ ಕೈದಿಯೋ ಆಗಿ ಬಳಲುವಾಗ ಹುಟ್ಟಿದ್ದು." ಆದರೆ ಕನ್ನಡ ಬಂಡಾಯ ಕವಿಗಳಿಗೆ ಈ ಮಟ್ಟಿನ ವರ್ತಮಾನದ ತುರ್ತು, ಸ್ವ-ಒತ್ತಡವಿರಲಿಲ್ಲ. ಆದರೂ ಸಾಮಾಜಿಕ ಸ್ತರದಲ್ಲಿ ಜರುಗುತ್ತಿರುವ ಅನ್ಯಾಯ, ಅತ್ಯಾಚಾರಗಳ ವಿರುದ್ಧ ತಕ್ಕಮಟ್ಟಿಗಿನ ಚಳುವಳಿಯಲ್ಲಿ ತೊಡಗಿದ್ದನ್ನು ಬೆಂಡಿಗೇರಿ, ರೂಪ ಕನ್ವರ್, ಕುದುರೆ ಮೋತಿ, ಶಹಬಾನು ಮೊದಲಾದ ಪ್ರಕರಣಗಳ ಉದಾಹರಣೆಗಳಲ್ಲಿ ನೋಡಬಹುದು. ಹೀಗಾಗಿ ಬಂಡಾಯ ಕವಿಗಳ ಕಾವ್ಯಕ್ಕೆ ಚಳುವಳಿಯಿಂದ ಸಹಜವಾಗಿ ದಕ್ಕುವ ಕಾವು ಸಿಕ್ಕಿದೆ. ನಮ್ಮ ಕವಿಯಿತ್ರಿಯರು ಇಂಥ ಚಳುವಳಿಗಳಲ್ಲಿ ನೇರವಾಗಿ ಪಾಲುದಾರರಾದವರಲ್ಲ. ಬೀದಿಗಿಳಿದವರು—ಒಬ್ಬಿಬ್ಬರು ಮಾತ್ರ. ಹೀಗಾಗಿ ಮಹಿಳಾ ಬಂಡಾಯ ಕಾವ್ಯದಲ್ಲಿ ಶೋಷಣೆಯ ನೋವು, ಪ್ರತಿಭಟನೆಯ ರೊಚ್ಚಿನ ಜೊತೆಗೆ ಚಳುವಳಿಯಿಂದ ಸಹಜವಾಗಿ ದಕ್ಕುವ ಕಾವು ಮೇಳವಿಸದೇ, ಕಾವ್ಯ ಅಷ್ಟರ ಮಟ್ಟಿಗೆ ಅಂಥ ತೀವ್ರತೆಯಿಂದ ವಂಚಿತವಾಗಿದೆ. ಮಹಿಳೆಯರು ಚಳುವಳಿಯಲ್ಲಿ ಭಾಗವಹಿಸಬಹುದಾದ ಸಾಧ್ಯತೆಯಿದ್ದಾಗಲೂ ಅಂಥ ಆರೋಗ್ಯ ಪೂರ್ಣ ವಾತಾವರಣ ಅವರಿಗೆ ದಕ್ಕಲಿಲ್ಲ ಎಂಬ ಸಾಹಿತ್ಯೇತರ ಕಾರಣ, ಮಹಿಳಾ ಕಾವ್ಯದ ತೀವ್ರತೆಗೆ ಹೊಡೆತ ಕೊಟ್ಟಿದೆ.

ಕೆಲ ಕವಿಯಿತ್ರಿಯರು ತಾವು ಅರಗಿಸಿಕೊಂಡಿದ್ದ ಸಿದ್ಧಾಂತಗಳನ್ನು ತಿಳಿಯಪಡಿಸಲು ಕಾವ್ಯವನ್ನು ಮಾಧ್ಯಮವನ್ನಾಗಿಸಿಕೊಂಡಿದ್ದಾರೆ, ಇದರಿಂದಾಗಿ ಇವರಿಗೆ ವಸ್ತು ಮುಖ್ಯವಾಗಿದೆಯೇ ಹೊರತೂ ಅಭಿವ್ಯಕ್ತಿಯ ಕ್ರಮವಲ್ಲ. ಸಿದ್ಧಾಂತವನ್ನು ಬೋಧಿಸುವುದೇ ಉದ್ದೇಶವಾದರೆ ಕಾವ್ಯ ಮಾಧ್ಯಮವನ್ನೇ ಅವಲಂಬಿಸಬೇಕೆಂದೇನೂ ಇರಲಿಲ್ಲ. ಸಿದ್ಧಾಂತವನ್ನು ಕಾವ್ಯವಾಗಿ ಅರಳಿಸುವಲ್ಲಿ ಪ್ರತಿಭೆ ಸಾಕಷ್ಟಿಲ್ಲ. ನವ್ಯ ಹೇಳುವ ರೀತಿಗೆ ಒತ್ತುಕೊಟ್ಟು ಸೋತಂತೆ, ಬಂಡಾಯ ಹೇಳುವ ವಸ್ತುವಿಗೆ ಮಾತ್ರ ಒತ್ತುಕೊಟ್ಟು ಸೋಲುತ್ತಿದೆ-ಎಂಬ ಮಾತಿನ ಸತ್ಯ ಇಂಥಲ್ಲಿ ಇನ್ನೂ ಸ್ಪಷ್ಟವಾಗುತ್ತದೆ. ಕಾವ್ಯವನ್ನು ಕಾವ್ಯವಾಗಿಯೇ ಉಳಿಸಿಕೊಳ್ಳುವ ಮೂಲಕ ವಸ್ತುವಿನ ಧ್ವನಿ ಸಾಧ್ಯತೆಗಳನ್ನು ಹೆಚ್ಚಿಸುವ ಕಲಾತ್ಮಕ ಕೌಶಲ್ಯವನ್ನು ನಮ್ಮ ಅನೇಕ ಕವಿಯಿತ್ರಿಯರು ಇನ್ನೂ ಒಗ್ಗಿಸಿಕೊಳ್ಳಬೇಕಿದೆ.

ಪುರುಷ ಪ್ರಧಾನ ಸಂಸ್ಕೃತಿಯಲ್ಲಿ ಸೃಷ್ಟಿಯಾದ ಭಾಷೆಯಲ್ಲಿ, ಸಹಜವಾಗಿ ನಾವು ಕಾಣುವುದು-ಬಹುಪಾಲು ಪುರುಷನ ಅನುಭವಗಳಿಗೆ ಸಂವಾದಿಯಾದ ಶಬ್ದಕೋಶವನ್ನು. ಪರಂಪರೆಯಿಂದ ಕವಿಯಿತ್ರಿಯರಿಗೆ ಲಭ್ಯವಾದದ್ದು ಇದೇ ಭಾಷೆ. ಇಂದು ತಕ್ಕಮಟ್ಟಿಗಾದರೂ ಸ್ವತಂತ್ರದ ಉಸಿರಾಡುವ ಮಹಿಳೆ ತನ್ನ ಸಂವೇದನೆಗಳಿಗೆ ಮುಕ್ತವಾಗಿ ಅಭಿವ್ಯಕ್ತಿಸಬಹುದಾಗಿದೆ. ಜೊತೆಗೆ ತಮ್ಮ ಸಂವೇದನೆಗಳಿಗೆ ಸಂವಾದಿಯಾದ ಹೊಸ ಪದಗಳ ನಿರ್ಮಾಣ ಮತ್ತು ಇದ್ದ ಪದಗಳನ್ನು ಅದರ ಒಟ್ಟೂ ಸಾಧ್ಯತೆಗಳೊಂದಿಗೆ ದುಡಿಸಿಕೊಳ್ಳಬೇಕಿದೆ. ಆದರೆ ಇಂಥ ಪ್ರಯೋಗಶೀಲತೆ ಕವಿಯಿತ್ರಿಯರಲ್ಲಿ ಹೇಳಿಕೊಳ್ಳುವಂತೆ ಕಂಡು ಬರುತ್ತಿಲ್ಲ. ಈಗಿದ್ದ ಭಾಷೆಯ ಮಿತಿಗಳಲ್ಲೇ ಅನುಭವಗಳನ್ನು ಎರಕಹೊಯ್ಯುತ್ತಿದ್ದಾರೆ. ಉಪಮೆ, ರೂಪಕ, ಪ್ರತಿಮೆಗಳ ನಿರ್ಮಾಣದಲ್ಲೂ ಅಂಥ ಹೊಸತನವಿಲ್ಲ. ವಸ್ತುವಿನಂತೆ ಅಭಿವ್ಯಕ್ತಿಯ ವಿಧಾನದಲ್ಲಿ ಏಕತಾನತೆ ಕಾಣುತ್ತಿದೆ. ಹಳಸಲನ್ನು ಒದೊಗೆದು ಇಂದು ಕನ್ನಡ ಕಾವ್ಯಕ್ಕೆ ತಾಜಾ ಅನುಭವ, ತಾಜಾ ಕಲ್ಪನೆ, ತಾಜಾ ಆಕೃತಿಗಳ ಅನಿವಾರ್ಯತೆಯಿದೆ. ಇಂಥ ಮಹತ್ವಾಕಾಂಕ್ಷೆಯನ್ನು ಕದುರಿಸಬಲ್ಲ ಕವಿಯಿತ್ರಿಯರು ಇಬ್ಬರೋ ಮೂವರೋ ಮಾತ್ರ.

ಕವಿಗಳಿಗಿದ್ದಂತೆ ಕವಿಯಿತ್ರಿಯರಿಗೆ ಕಾವ್ಯ ಪರಂ

ಪರೆಯಿಲ್ಲ. ಈಗ ಬರೆಯುತ್ತಿರುವ ಕವಯಿತ್ರಿಯರೇ ಅಂಥ ಪರಂಪರೆಯೊಂದರ ನಿರ್ಮಾಣದಲ್ಲಿ ತೊಡಗ ಬೇಕಿದೆ, ಇಂದಿನ ಮಹಿಳಾ ಬರಹಗಾರರ ಮೇಲೆ ಈ ಜವಾಬ್ದಾರಿಯೂ ಇದೆ, ಎಚ್ಚರಯುತವಾದ ಸತ್ವಪೂರ್ಣವಾದ ಅಭಿವ್ಯಕ್ತಿ ಇಂದಿನ ಅವಶ್ಯಕತೆ ಯಾಕೆಂದರೆ— "ಮಹಿಳಾ ಕಾವ್ಯ" ಎಂಬ ತಾತ್ಸಾರ ಪೂರಿತ ಇಲ್ಲವೇ ಅನುಕಂಪಯುತ ವಿಮರ್ಶೆಯ ಮಾನದಂಡಗಳ ಪ್ರತ್ಯೇಕತೆಯನ್ನು ಮೀರಿ, ಒಟ್ಟು ಸಾಹಿತ್ಯಿಕ ಸಂದರ್ಭದಲ್ಲಿ ಸರಿದಾರಿಯಲ್ಲಿ ಸಾಗುವ ಅನಿವಾರ್ಯತೆಯನ್ನು ಮಹಿಳಾ ಬಂಡಾಯ ಕಾವ್ಯ ಎದುರಿಸುತ್ತಿದೆ, ತನ್ನ ಮಿತಿಗಳನ್ನು ಮೀರುತ್ತಾ ಹೊಸ ಸಾಧ್ಯತೆಗಳತ್ತ ಹೊರಳುವ ಸೂಚನೆಗಳು ಅಲ್ಲಲ್ಲಿ ಮಿಂಚುತ್ತಿರುವುದು ಮುಂದಿನ ಪೀಳಿಗೆಯ ಕವಯಿತ್ರಿಯರ ಸಾಧನೆಯ ಬಗ್ಗೆ ಕುತೂಹಲವನ್ನೂ ಆಶಾವಾದವನ್ನೂ ಹುಟ್ಟಿಸುತ್ತಿದೆ.

ಅಕ್ಕ ಪಕ್ಕ

ಎಲ್ಲ ಮಹಿಳಾ ಕಾರ್ಯಕ್ರಮಗಳು ಕೆಳ ವರ್ಗವನ್ನು ಗಮನದಲ್ಲಿಟ್ಟುಕೊಳ್ಳಬೇಕು. ಗ್ರಾಮೀಣ ಪ್ರದೇಶಗಳು ಯಾಂತ್ರೀಕರಣಗೊಂಡರೆ ಮಹಿಳೆ ಮೊದಲು ತೊಂದರೆಗೊಳಗಾಗುತ್ತಾಳೆ.

ಮಾರ್ಗರೆಟ್ ಆಳ್ವ
ಕೇಂದ್ರ ಸಿಬ್ಬಂದಿ, ಸಾರ್ವಜನಿಕ ಕುಂದು ಕೊರತೆ ಮತ್ತು ನಿವೃತ್ತಿ ವೇತನ ಖಾತೆ ರಾಜ್ಯ ಸಚಿವೆ.

ನಾನು ಯೋಚಿಸುವ ಅಧಿಕಾರ ಹೊಂದಿದ್ದೇನೆ. ನಾನು ಬಿ. ಜೆ. ಪಿ. ಯನ್ನು ಸೇರುವ ನನ್ನ ನಿರ್ಧಾರವನ್ನು ನನ್ನ ಗಂಡನಿಗೆ ತಿಳಿಸಿದೆ, ಆತನೂ ಅದನ್ನು ತಡೆಯಲಿಲ್ಲ. ಈಗ ಕಾಲ ಬದಲಾಗಿದೆ, ಹಿಂದಿನಂತಿಲ್ಲ. ಗಂಡಂದಿರ ಒತ್ತಡಕ್ಕೆ ಮಣಿದು ಅವರು ಹೇಳಿದಂತೆ ಮತ ಚಲಾಯಿಸುವ ದಿನಗಳಲ್ಲಿ ಇವು. ಈಗಿನ ಸ್ತ್ರೀಯರಿಗೂ ನಿಖರ ದೃಷ್ಟಿಕೋನಗಳಿವೆ.

ಇಳಾ ಪಂತ್,

ನಾನು ಬೇರೆ ಸ್ತ್ರೀಯರಿಗೆ ಮಾದರಿಯಾಗಿದ್ದೇನೆ ಎಂಬುದು ನನಗೆ ಗೊತ್ತಿದೆ. ನೀವು ನಿಮ್ಮೆರಡು ಕಾಲುಗಳಿಂದಲೇ, ಸ್ವತಂತ್ರವಾಗಿ, ತಲೆ ಎತ್ತಿ ನಡೆಯಬಲ್ಲಿರಿ ಎಂದು ನಾನು ಬೇರೆ ಮಹಿಳೆಯರಿಗೆ ಹೇಳ ಬಯಸುತ್ತೇನೆ.

ಕಾವೇರಿ ಮುಖರ್ಜಿ,
ವಾರ್ತಾ ವಾಚಕಿ

ಖಂಡಿತ ಈ ಪ್ರಶಸ್ತಿಗೆ ವೆಂಕಟಲಕ್ಷ್ಮಮ್ಮ ಅರ್ಹರು. ಆಕೆಗೆ ಪದ್ಮ ವಿಭೂಷಣ ಪ್ರಶಸ್ತಿಯೇ ಸಿಕ್ಕಬೇಕಾಗಿತ್ತು. ಮಲ್ಲಿಕಾರ್ಜುನ ಮನ್ಸೂರ್ ಹಿಂದುಸ್ತಾನಿ ಸಂಗೀತ ಕ್ಷೇತ್ರದಲ್ಲಿ ಎಷ್ಟು ಪ್ರತಿಭಾವಂತರೋ ವೆಂಕಟಲಕ್ಷ್ಮಮ್ಮ ಮೈಸೂರು ಸಂಪ್ರದಾಯದ ನೃತ್ಯಕಲೆಯಲ್ಲಿ ಅಷ್ಟೇ ಪ್ರತಿಭಾವಂತರು. ವೆಂಕಟಲಕ್ಷ್ಮಮ್ಮ ಅವರ ಗುರು ಜಟ್ಟಿತಾಯಮ್ಮ ಅವರನ್ನು ಅವರ ನೃತ್ಯವನ್ನು ನಾನು ನೋಡಿದ್ದೆ. ಅದರ ಪಡಿಯಚ್ಚಿನಂತಿದೆ ವೆಂಕಟಲಕ್ಷ್ಮಮ್ಮ ಅವರ ನೃತ್ಯ. ಈಕೆಗೆ ಪದ್ಮ ವಿಭೂಷಣವೇ ಬರಬೇಕಾಗಿತ್ತು.

ಚದುರಂಗ

ಈ ಕಲೆಯನ್ನು ಉಳಿಸಿ ಬೆಳೆಸುವುದು ನನ್ನ ಕರ್ತವ್ಯ. ಅದಕ್ಕಾಗಿ ಜೀವನವನ್ನೇ ಮುಡುಪಾಗಿಟ್ಟಿದ್ದೇನೆ. ಈ ಕಲೆಯೇ ನನ್ನ ಉಸಿರು. ನನ್ನ ಸರ್ವಸ್ವ.

ವೆಂಕಟಲಕ್ಷ್ಮಮ್ಮ
ಪದ್ಮ ಭೂಷಣ ಪುರಸ್ಕೃತ ಮೈಸೂರು ಶೈಲಿಯ ನೃತ್ಯ ಕಲಾವಿದೆ.

ದಿಕ್ಕೆಟ್ಟ ಗೃಹ ಮಾತೆಯರು

ಖಾಸಗಿ ಒಡೆತನದ ಸಂಸ್ಥೆಗಳಲ್ಲಿ ಕೆಲಸ ಮಾಡುವ ನೌಕರರ ಶೋಷಣೆ ಅಪರೂಪದ ಮಾತಲ್ಲ. ಎಷ್ಟೋ ಕಡೆಗಳಲ್ಲಿ ಕಾರ್ಮಿಕ ಸಂಘಟನೆಗಳನ್ನು ಸಂಘಟಿಸುವ ಅವಕಾಶವಿಲ್ಲದಂತೆ ಮಾಡುವುದೂ ಉಂಟು. ಸಣ್ಣಪುಟ್ಟ ಖಾಸಗಿ ಕಂಪೆನಿಗಳು ಸ್ತ್ರೀಯರನ್ನೇ ಹೆಚ್ಚಾಗಿ ಕೆಲಸಗಳಿಗೆ ಸೇರಿಸಿಕೊಳ್ಳಲು ಇದೂ ಒಂದು ಕಾರಣ ಎಂದು ಹೇಳಲಾಗುತ್ತದೆ. ಇಂಥ ಸಂದರ್ಭಗಳಲ್ಲಿ ನ್ಯಾಯಕೋರಿ ಕೋರ್ಟ್ ಮೆಟ್ಟಿಲು ತುಳಿಯುವುದು, ಸರಕಾರದ ನೆರವು ಬೇಡುವುದು ಸಾಮಾನ್ಯ. ಆದರೆ ಸರ್ಕಾರದ ಅಧೀನದಲ್ಲಿರುವ ಸಂಸ್ಥೆಗಳಲ್ಲೂ ಶೋಷಣೆ, ಲಿಂಗಭೇದಗಳು ನಡೆವುದುಂಟು.

"ಬಾಲ ಕಲ್ಯಾಣ ನಗರಿ" ಹೆಸರೇ ಸೂಚಿಸುವಂತೆ ಪೋಷಕರಿಲ್ಲದ ಮಕ್ಕಳ ಅಭಿವೃದ್ಧಿಗೋಸ್ಕರ ದುಡಿಯುತ್ತಿರುವ ಸಂಸ್ಥೆ. ಬಾಂಬೆಯಲ್ಲಿರುವ ಈ ಸಂಸ್ಥೆ ಸರ್ಕಾರದ ಅಧೀನಕ್ಕೆ ಸೇರಿದೆ. ಚಿಲ್ಡ್ರನ್ ಏಯ್ಡ್ ಸೊಸೈಟಿ ೧೯೭೫ ರಲ್ಲಿ ಇದನ್ನು ಸ್ಥಾಪಿಸಿತು. ೨೦ ಮಂದಿ ಗೃಹಮಾತೆಯರು, ಚಪಾತಿ ತಯಾರಿಸಲೆಂದೇ ೧೦ ಮಂದಿ ಮಹಿಳಾ ಕೆಲಸಗಾರ್ತಿಯರನು ಹೊಂದಿರುವ ಈ ಸಂಸ್ಥೆಯಲ್ಲಿ ೬೬೪ ಮಂದಿ ಮಕ್ಕಳಿದ್ದಾರೆ. ಎಲ್ಲ ೬–೧೮ ವರ್ಷದೊಳಗಿನ ಮಕ್ಕಳು ಇಲ್ಲಿನ ಮಕ್ಕಳ ಅಭಿವೃದ್ಧಿಗಾಗಿ ಮೂಗಿಗೆ ಕವಡೆ ಕಟ್ಟಿಕೊಂಡು ದುಡಿಯುತ್ತಿರುವ ಮಹಿಳೆಯರ ಶೋಚನೀಯ ಪರಿಸ್ಥಿತಿಯ ಬಗ್ಗೆ ಎರಡು ಮಾತುಗಳು,

ಮಂದಾಕಿನಿ ಜೋಷಿ ೧೨ ವರ್ಷಗಳಿಂದ ಇಲ್ಲಿ ಗೃಹಮಾತೆಯಾಗಿ ಕಾರ್ಯ ನಿರ್ವಹಿಸಿಕೊಂಡು ಬಂದಿದ್ದಾರೆ. ಸೇರಿದಾಗ ೨೦೦ ರೂ. ಗಳ ಪಗಾರ ಪಡೆಯುತ್ತಿದ್ದರು ಈಗ ರೂ ೪೦೦ಕ್ಕೆ ಬಡ್ತಿಯಾಗಿದೆ. ಕೆಲಸ ಮಾತ್ರ ೨೪ ಗಂಟೆಯೂ ಇದ್ದೇ ಇರುತ್ತದೆ. "ನಮಗೆ ಯಾವುದೇ ಪ್ರಾವಿಡೆಂಟ್ ಫಂಡ್, ನಿವೃತ್ತಿ ನಂತರದ ಪೆನ್ಷನ್ ಈ ಯಾವುದೇ ಸೌಲಭ್ಯಗಳಿಲ್ಲ. ಕಳೆದ ೧೫ ವರ್ಷಗಳಿಂದಲೂ ನಡೆದುಕೊಂಡು ಬಂದಿರುವ ಈ ಯೋಜನೆಯನ್ನು "ತಾತ್ಕಾಲಿಕ" ಎಂದು ಹೇಳಿಕೊಳ್ಳುತ್ತಾ ಎಲ್ಲ ಸೌಲಭ್ಯಗಳನ್ನು ನಿರಾಕರಿಸಲಾಗಿದೆ," ಎಂದು ಮಂದಾಕಿನಿ ಜೋಷಿಯವರು ನುಡಿಯುತ್ತಾರೆ. ೬೬೪ ಮಂದಿ ಮಕ್ಕಳ ಬೇಕು ಬೇಡಗಳನ್ನು ಸದಾ ಗಮನಿಸಬೇಕಾದ ಇಲ್ಲಿ ವಿರಾಮ ಎಂಬ ಪದಕ್ಕೇ ತಾವಿಲ್ಲ. ಯಾವ ಗೃಹಮಾತೆಯರೂ ಕೆಲಸಗಾರ್ತಿಯರೂ ಇದಕ್ಕೆ ಹೊರತಲ್ಲ. ಈ ಮಹಿಳೆಯರದು "ದುಡಿದರೆ ಜೀವನ" ಎಂಬಂಥ ಹಿನ್ನೆಲೆಯುಳ್ಳವರು. ಒಂದೋ ಕುಡುಕ ಗಂಡ, ಇಲ್ಲ, ವಿಧವೆಯರಾಗಿರುವ ಈ ಎಲ್ಲ ಸ್ತ್ರೀಯರ ಗಾಣದೆತ್ತಿನಂಥ ದುಡಿತ ಅವರ ಸಂಸಾರಕ್ಕೆ ಆಧಾರವಾಗಿದೆ.

ಕೆಲಸದ ಬಗ್ಗೆ ಇನ್ನೂ ಹೇಳುವುದಾದರೆ ವರ್ಷಕ್ಕೆ ೦೦ ದಿನಗಳ ರಜೆಯ ಸೌಲಭ್ಯವಿರುವುದು ಹೌದು. ಆದರೆ ಯಾರೊಬ್ಬರಿಗೂ ಅದನ್ನು ಉಪಯೋಗಿಸಿಕೊಳ್ಳಲಾರದಂಥ ಸ್ಥಿತಿ. ಏಕೆಂದರೆ ಯಾರಾದರೂ ಒಬ್ಬರು ಒಂದು ದಿನ ರಜೆ ಹಾಕಿದರೆ ಅವರ ಪಾಲಿನ ಎಲ್ಲ ಕೆಲಸವನ್ನೂ ಉಳಿದವರೇ ನಿರ್ವಹಿಸಬೇಕು ತಮ್ಮ ಕೆಲಸದ ಜೊತೆಯಲ್ಲಿ, ತಮ್ಮ ಪಾಲಿನ ಕೆಲಸದ ಹೊರೆಯೇ ಬೇಕಷ್ಟಿರುವಾಗ ರಜೆ ಹಾಕಿದವರ ಕೆಲಸದ ಹೊರೆ ಮತ್ತಷ್ಟು ಕೆಲಸದ ಒತ್ತಡಕ್ಕೆ ಕಾರಣವಾಗುತ್ತದೆ. ನಿರ್ವಹಿಸುವುದೂ ಅಸಾಧ್ಯ. ಇದು ಪ್ರತಿಯೊಬ್ಬರ ಅನುಭವವಾದ್ದರಿಂದ ಯಾರೂ

"ರಜೆ" ಯ ಆನಂದವನ್ನು, ಉಪಯೋಗವನ್ನು ಅನುಭವಿಸಲಿಚ್ಛಿಸುವುದಿಲ್ಲ.

ಸಿಂದು ತಾಯಿ ಬಾಮನಕರ್ ಕಳೆದ ೫ ವರ್ಷಗಳಿಂದ ಇಲ್ಲಿ 'ಹೌಸ್ ಮದರ್' ಆಗಿ ದುಡಿಯುತ್ತಿದ್ದಾರೆ. ಆಕೆ "ನಮ್ಮ ಸಂಬಂಧಿಕರಿಗೆ ನಮ್ಮ ಕೋಣೆಗಳಿಗೆ ಪ್ರವೇಶವಿಲ್ಲ. ನಮ್ಮ ಮಕ್ಕಳನ್ನೂ ನಾವು ನಮ್ಮ ಸಂಬಂಧಿಗಳ ಮನೆಯಲ್ಲಿ ಬಿಡಬೇಕು ಕಡಿಮೆ ಆದಾಯವಿರುವುದರಿಂದ ಹಾಗೂ ತಂದೆ ಇಲ್ಲದಿರುವುದರಿಂದ ನಮ್ಮ ಮಕ್ಕಳಿಗೆ ಇಲ್ಲಿರುವ ಅವಕಾಶ, ಅರ್ಹತೆ ಇದ್ದರೂ ಆಡಳಿತ ಮಂಡಳಿ ಇದಕ್ಕೆ ಸಮ್ಮತಿಸುತ್ತಿಲ್ಲ" ಎನ್ನುತ್ತಾರೆ ನೋವಿನಿಂದ. ಇಲ್ಲೇ ಗೃಹಮಾತೆಯಾಗಿರುವ ಮಾಲತಿ ವಾಲವಾಕರ್, ಪುಷ್ಪ ಸಲಗಾಂವಕರ್ ಅವರ ಮಕ್ಕಳನ್ನು ಈ ಕಾರಣಕ್ಕಾಗಿಯೇ ಕ್ರಮವಾಗಿ ಸೇವಾ ಸದನದಲ್ಲಿ ಮತ್ತು ಶ್ರದ್ಧಾನಂದ ಆಶ್ರಮಗಳಲ್ಲಿ ಬಿಟ್ಟಿದ್ದಾರೆ. ವಿಚಿತ್ರವೆಂದರೆ ಇದೇ ರೀತಿ ಕೆಲಸಮಾಡುವ ಗೃಹಪಿತೃಗಳು(ಹೌಸ್ ಫಾದರ್) ತಮ್ಮ ಮಕ್ಕಳನ್ನು ತಮ್ಮ ಬಳಿಯಲ್ಲೇ ಇರಿಸಿಕೊಳ್ಳುವ ಅವಕಾಶವುಂಟು. ಹೀಗಿರುವಾಗ ಸ್ತ್ರೀಯರು ತಮಗೆ ಅನ್ಯಾಯವಾಗುತ್ತಿದೆ ಎಂದುದರಲ್ಲಿ ಏನು ಉತ್ಪ್ರೇಕ್ಷೆಯಿದೆ?

ಆಡಳಿತ ಮಂಡಲಿ ತಮ್ಮೆಲ್ಲರ ಅಸಹಾಯಕತೆಯನ್ನು ಚೆನ್ನಾಗಿ ಉಪಯೋಗಿಸಿಕೊಳ್ಳುತ್ತಿದೆ ಎಂದು ಸುನಂದಾ ಯಸುಗಾಡೆಯವರು ಅಭಿಪ್ರಾಯ ಪಡುವರು. "ನಮಗೆ ವಾಸದ ವ್ಯವಸ್ಥೆ ಮಾಡಿಕೊಟ್ಟಿರುವುದಾಗಿ ಅವರು ಹೇಳುತ್ತಾರೆ. ಆದರೆ ನಮಗೆ ನೀಡಿರುವ ನೇಮಕಾತಿ ಪತ್ರದಲ್ಲಿ "ತಾತ್ಕಾಲಿಕ" ಎಂದು ಸ್ಪಷ್ಟವಾಗಿ ನಮೂದಿಸಿರುತ್ತಾರೆ. ಯಾವುದೇ ಸೂಚನೆಯಿಲ್ಲದೇ ಯಾವುದೇ ಸಮಯದಲ್ಲಿ ಬೇಕಾದರೂ ನಮ್ಮನ್ನು ಬೀದಿಗೆ ತಳ್ಳಬಹುದು. "ನಿಮ್ಮ ಸಂಬಳ ಕಮ್ಮಿ ಎಂದು ನಿಮಗೆನ್ನಿಸಿದ ಘಳಿಗೆಯಲ್ಲಿ ಈ ಸಂಸ್ಥೆಯನ್ನು ಬಿಟ್ಟುಹೋಗಲು ಸ್ವತಂತ್ರರು. ಉತ್ತಮ ಶಿಫಾರಸ್ಸಿನ ಪತ್ರವನ್ನೂ ನಿಮಗೆ ಕೊಡುತ್ತೇವೆ" ಎಂದು ಅವರು (ಆಡಳಿತ ಮಂಡಳಿ) ಹೇಳುತ್ತಾರೆ" ಎಂದರು ಸುನಂದ

ಮೇಲೆ ತಿಳಿಸಿದ್ದು ಗೃಹಮಾತೆಯರ ಬವಣೆಯಾದರೆ, ಇತರ ಹೆಂಗಸರದೂ ಅದೇ ಪರಿಸ್ಥಿತಿ. ಇವರ ಮುಖ್ಯ ಕೆಲಸ ಚಪಾತಿಗಳನ್ನು ಮಾಡುವುದು. "ಬಾಲ ಕಲ್ಯಾಣ ನಗರಿ" ಯಲ್ಲಿ ೧೩ ವರ್ಷದಿಂದ ಇದೇ ಉದ್ಯೋಗ ಮಾಡಿಕೊಂಡು ಬಂದ ಸುಸೀತಾ ಸಾವಂತ್, "ಆರಂಭದಲ್ಲಿ ೧೫೦ರೂ. ಸಂಬಳ ಪಡೆಯುತ್ತಿದ್ದೆ. ಈಗ ತಿಂಗಳಿಗೆ ೨೫೦ರೂ. ಪ್ರತಿದಿನ ೪೫೦ ಚಪಾತಿಗಳನ್ನು ತಯಾರಿಸಬೇಕು ನಾನು. ಚಿಲ್ಡ್ರನ್ಸ್ ಏಡ್ ಸೊಸೈಟಿಯ ರಿಮಾಂಡ್ ಹೋಂನಲ್ಲಿರುವ ಗೃಹಪಿತೃಗಳಿಗೆ ನಾವು ಮಾಡುವಂಥ ಯಾವ ಕೆಲಸವೂ ಇಲ್ಲ. ಕೇವಲ ಆ ಮಕ್ಕಳಿಗೆ ಆಹಾರ ನೀಡುವುದಷ್ಟೇ ಅವರ ಕೆಲಸ. ಆದರೂ ಅವರಿಗೆ ತಿಂಗಳಿಗೆ ೧೦೦೦—೧೫೦೦ರೂ. ಸಂಬಳ" ಎಂದು ಹೇಳುತ್ತಾರೆ.

ದಿನನಿತ್ಯದ ಅಗತ್ಯಗಳಿಗೂ ಇಲ್ಲಿ ಕೊರತೆಯೇ. ಉದಾಹರಣೆಗೆ ಹೇಳುವುದಾದರೆ, ಎಷ್ಟೋ ವೇಳೆ ೩ ತಿಂಗಳುಗಳವರೆಗೆ ಮಕ್ಕಳ ಬಟ್ಟೆ ಒಗೆಯಲು ಸೋಪೇ ಇರುವುದಿಲ್ಲ. ಏಕೆಂದರೆ ಮೇಲಿನವರ ಅನುಮತಿಯಿರಬೇಕಲ್ಲ. ಸೋಪು ಬೇಕೆಂಬ ಬೇಡಿಕೆಯ ಪತ್ರ ಮೇಜಿನ ಮೇಲೆ ಹಾಗೇ ಇರುತ್ತದೆ. ದಿನಗಟ್ಟಳೆ ಅದೇ ರೀತಿ ಮಕ್ಕಳ ತಲೆಗೆ ಎಣ್ಣೆ, ಸಾಂಬಾರ ಸಾಮಗ್ರಿಗಳು, ಉಪ್ಪು........ಹೀಗೆ ಹೆಚ್ಚು ಕಮ್ಮಿ ಎಲ್ಲವುಗಳ ಕೊರತೆ ಇದ್ದೇ ಇರುತ್ತದೆ. "ರೂಂಗಳಲ್ಲಿ ಫ್ಯಾನ್‌ಗಳಿಲ್ಲ, ಕಿಟಕಿಗಳೋ ಎಲ್ಲ ಒಡೆದು ಹಾಳಾಗಿವೆ. ಮಕ್ಕಳಿಗೆ ಸೇರಿದ ಎಲ್ಲ ವಸ್ತುಗಳನ್ನೂ ನಮ್ಮ ರೂಂಗಳಲ್ಲಿ ತುರುಕಲಾಗಿದೆ" ಎಂದು ದೂರುತ್ತಾರೆ. ಸಿಂಧು ತಾಯಿ,

ತಮಗಾಗುತ್ತಿರುವ ಅನ್ಯಾಯಕ್ಕೆ ರೋಸಿ ಈ ಮಹಿಳೆಯರು ಕೈಗಾರಿಕಾ ನ್ಯಾಯಾಲಯಕ್ಕೆ ದಾವೆ ಹೂಡಿದ್ದಾರೆ—ಕಾರ್ಮಿಕ ವಿರೋಧಿ ನೀತಿ ಕಾನೂನಿ ನಡಿಯಲ್ಲಿ. ಏನೂ ಇತ್ಯರ್ಥವಾಗದೆ ಜುಲೈ ೩೦ರವರೆಗೆ ಹಾಗೇ ಬಿದ್ದಿತ್ತು ಈ ಕೇಸು. ಸಧ್ಯಕ್ಕೆ ಯಾರನ್ನೂ ವಜಾ ಮಾಡಲಾಗದಂತೆ ಕೋರ್ಟಿನಿಂದ ತಡೆಯಾಜ್ಞೆ ತರುವಲ್ಲಿ ಯಶಸ್ವಿಯಾಗಿದ್ದಾರೆ.

ಮಹಿಳಾ ವಕೀಲರಾಗಿರುವ ಗಾಯತ್ರಿ ಸಿಂಗ್ ಈ ಮಹಿಳೆಯರ ಪರವಾಗಿ ನ್ಯಾಯಾಲಯದಲ್ಲಿ ಹೋರಾಟ ನಡೆಸುತ್ತಿದ್ದಾರೆ. "ಸ್ತ್ರೀ–ಶಕ್ತಿ ಸದನ" ಎಂಬ ಸ್ವಯಂಸೇವಾ ಸಂಘಟನೆಯ ಸುಶೀಲಾ ಕಾರ್ಡೋಜೋ ಮಹಾರಾಷ್ಟ್ರದ ಸಮಾಜ ಕಲ್ಯಾಣ ಮಂತ್ರಿಯಾದ ರಾಮದಾಸ್ ಅತವಾಲೆಯವರಿಗೆ ನಗರಿಯ ಮಹಿಳೆಯರಿಗೆ ಸಹಾಯ ಹಸ್ತ ನೀಡಲು ಕೋರಿ, ಮನವಿ ಪತ್ರವೊಂದನ್ನು ಬರೆದಿದ್ದಾರೆ.

ಏತನ್ಮಧ್ಯೆ "ಮಕ್ಕಳ ಕಲ್ಯಾಣ" ಕ್ಕಾಗಿ ಅವಿರತ ಜೀವ ತೇಯುತ್ತಿರುವ ಈ ಮಹಿಳೆಯರ ದುರವಸ್ಥೆ ಸ್ವಲ್ಪವೂ ಕಡಿಮೆಯಾಗಿಲ್ಲ. ಹಾಗೇ ಮುಂದುವರೆದಿದೆ. ತಮ್ಮ ಸುಖ, ಕಲ್ಯಾಣಗಳಿಗಿಂತ ತಮ್ಮ ಇರುವಿಕೆಯ ಬಗ್ಗೆಯೇ ಸಂಶಯ, ಗಾಬರಿ. ಈ ಒಡಪಾಯಿಗಳಿಗೆ, ಪ್ರತಿ ದಿನವನ್ನೂ ಭಯದಿಂದಲೇ ಕಳೆಯುತ್ತಾರೆ. ತಮ್ಮ ಬಾಳಿನ ಬಗ್ಗೆ, ಭವಿಷ್ಯದ ಬಗ್ಗೆ ಸದಾ ಆಲೋಚನೆ. ಆತಂಕಗಳಿದ್ದರೂ. ಮುಂದೊಂದು ದಿನ ಒಳ್ಳೆಯ ಕಾಲ ಬರಬಹುದು ಎಂಬ ಆಶಾ ಸುಳಿ ಇವರಲ್ಲಿದೆ.

ಮಹಿಳೆಯರ ಹಾಗೂ ಮಕ್ಕಳ ಪ್ರಗತಿಗೆಂದು ಸರ್ಕಾರ ಕೋಟಿಗಟ್ಟಲೆ ರೂಪಾಯಿಗಳನ್ನು ಖರ್ಚು ಮಾಡುತ್ತದೆ. ಹೊಸ ಯೋಜನೆಗಳನ್ನೂ ರೂಪಿಸುತ್ತದೆ. ಇವುಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಕೆಲಸ ಮಾಡುವವರು "ತಾತ್ಕಾಲಿಕ" ಎಂಬ ಹಣೆಪಟ್ಟಿಯಡಿ, "ಗೌರವ ಸೇವೆ" ಎಂಬ ತಲೆಬರಹದಡಿ ದುಡಿಯಬೇಕಾಗುತ್ತದೆ. ಈ ಯೋಜನೆಗಳ "ತಾತ್ಕಾಲಿಕತೆ" ವರ್ಷಗಟ್ಟಲೆ ಮುಂದುವರೆಯಬಹುದು. ಆದರೆ ಯೋಜನೆಯ ಉಪಯುಕ್ತತೆ ಪಡೆವ ಮಂದಿಯ ಅಭಿವೃದ್ಧಿಗೆ, ಕಲ್ಯಾಣಕ್ಕೋಸ್ಕರ ಪರಿಶ್ರಮ ಪಡುವವರ ಸ್ಥಿತಿ ಮಾತ್ರ ಹಾಗೇ ಮುಂದುವರೆದುಕೊಂಡು ಹೋಗುತ್ತದೆ. ಇಲ್ಲಿ ಹೇಳಿದ ಗೃಹಮಾತೆಯರಂತೇ ಅಂಗನವಾಡಿ ಕಾರ್ಯಕರ್ತೆಯರದೂ ಸಹ ಇದೇ ಕಥೆ. ಹೀಗೆ ಸಮಾಜದ ಏಳ್ಗೆಗೆಂದು ದುಡಿಯುವವರ ಅಭಿವೃದ್ಧಿಗೆ ಮತ್ತೊಂದು ಯೋಜನೆಯನ್ನೇ ಹಮ್ಮಿಕೊಳ್ಳಬೇಕಾಗುವುದೇನೋ?

(ಸಾಧಾರ)

ಗೀತಾ ಜಿ. ಎಸ್.

0 0 0 0 0 0

ಓದುಗರಲ್ಲಿ ಮನವಿ

ಗಗನಕ್ಕೇರುತ್ತಿರುವ ಮುದ್ರಣ ಕಾಗದದ ಬೆಲೆ, ಅಂಚೆ ವೆಚ್ಚ ಮುಂತಾದವುಗಳಿಂದಾಗಿ ಪತ್ರಿಕೆಯನ್ನು ಪ್ರಕಟಿಸುವುದು ಕಷ್ಟಕರವಾಗಿದೆ. ಮಾನಸಕ್ಕೆ ಆಸಕ್ತಿ ಹಾಗೂ ಪ್ರೋತ್ಸಾಹ ವ್ಯಕ್ತಪಡಿಸಿ ಪತ್ರ ಬರೆಯುವ ಸಹೃದಯರು ಹಾಗೂ ಚಂದಾ ಮುಗಿದಿರುವ ಓದುಗರು ತಕ್ಷಣ ಚಂದಾಹಣ ಕಳಿಸಿದರೆ ಪತ್ರಿಕೆಯನ್ನು ಉಳಿಸಿ ಬೆಳೆಸಲು ನೀರೆರೆದು ಪ್ರೋತ್ಸಾಹಿಸಿದಂತಾಗುತ್ತದೆ. ಓದುಗರೆಲ್ಲರನ್ನು ಉಳಿಸಿಕೊಳ್ಳಬೇಕೆಂದು ನಮ್ಮ ಅಪೇಕ್ಷೆಯಾದರೂ ಉಚಿತವಾಗಿ ಒಂದು ಸಂಚಿಕೆಯನ್ನು ಕಳಿಸಲು ಉಂಟಾಗುವ ಖರ್ಚನ್ನು ಭರಿಸುವುದು ಪತ್ರಿಕೆಗೆ ಹೊರೆಯಾಗುತ್ತದೆ. ಪ್ರಿಯ ಓದುಗರು ಸಹಕರಿಸಿ ತಕ್ಷಣ 20-00 ರೂ ಚಂದಾ ಹಣ ಕಳಿಸಿಕೊಡಬೇಕೆಂದು ಕೋರುತ್ತೇನೆ.

ಸಂ. ಮಂ.

ಮಾಧವಿ

ಮೂ. ಲೇ: ಭೀಷ್ಮ ಸಾಹನಿ
ಅನು: ಗೋರೂರು ಶ್ರೀನಿವಾಸ ಮೂರ್ತಿ
ಪ್ರ: ನವಕರ್ನಾಟಕ ಪಬ್ಲಿಕೇಷನ್ಸ್
ಪ್ರೈ. ಲಿಮಿಟೆಡ್.

ಈ ನಾಟಕದಲ್ಲಿ ಬರುವ "ಮಾಧವಿ" ಕೀರ್ತಿ ಆಕಾಂಕ್ಷಿ ಯಯಾತಿ ಮಹಾರಾಜನ ಮಗಳು. ವಿಶ್ವಾಮಿತ್ರನ ಶಿಷ್ಯ ಗಾಲವ ಗುರುದಕ್ಷಿಣೆಯಾಗಿ ಏನು ನೀಡಬೇಕೆಂದು ತನ್ನ ಗುರುವನ್ನು ಆಗ್ರಹಿಸಿ ಕೇಳಿದಾಗ ೮೦೦ ಅಶ್ವಮೇಧಿ ಕುದುರೆಗಳನ್ನು ಕೇಳುತ್ತಾನೆ. ವಿಶ್ವಾಮಿತ್ರ ತನ್ನ ಶಿಷ್ಯನ ಕೈಲಾಗದುದನ್ನೇ ಗುರುದಕ್ಷಿಣೆಯಾಗಿ ಕೇಳಿ ಅವನ ಅಹಂಕಾರ ಮುರಿಯಲು ನಿಶ್ಚಯಿಸಿದ್ದ, ಗಾಲವನೂ ಎಷ್ಟೇ ಕಷ್ಟವಾದರೂ ವಚನವನ್ನು ನಡೆಸಿಕೊಡಲು ನಿಶ್ಚಯಿಸಿರುತ್ತಾನೆ. ಕೀರ್ತಿಯಾಕಾಂಕ್ಷಿಯಾದ ತಂದೆ, ತಾನು ವಚನಬದ್ಧನೆಂದೂ ತನ್ನ ವಚನ ಈಡೇರಿಕೆಯ ಮುಂದೆ ಉಳಿದೆಲ್ಲವೂ ತೃಣ ಸಮಾನ ಎಂದು ಭಾವಿಸಿದ ಗಾಲವ — ಈ ಇಬ್ಬರ ಗುರಿ ಸಾಧನೆಗೆ "ಸಾಧನ" ವಾಗಿ ಬರುವ ಮಾಧವಿಯ ಸುತ್ತ ಉಳಿದ ಪಾತ್ರಗಳು ಕೇಂದ್ರೀಕರಿಸಲ್ಪಟ್ಟಿವೆ.

ಪ್ರಶಂಸಾಪ್ರಿಯ ಯಯಾತಿ ಸರ್ವವನ್ನೂ ತ್ಯಜಿಸಿ, ಆಶ್ರಮವಾಸಿಯಾಗಿದ್ದರೂ ತನ್ನ ಮಗಳ "ಸ್ವಯಂವರ" ನೆರವೇರಿಸಿ ಆ ಮೂಲಕ ತಂದೆಯ ಕರ್ತವ್ಯದಿಂದ ವಿಮುಕ್ತನಾಗಬೇಕು ಎಂದುಕೊಂಡಿರುತ್ತಾನೆ. ಆದರೆ ಆತನಿಗೆ "ಅಹಂ" ನಿಂದ ತಪ್ಪಿಸಿಕೊಳ್ಳಲಾಗುವುದಿಲ್ಲ, ಹರಿಶ್ಚಂದ್ರ, ಕರ್ಣ, ಯುಧಿಷ್ಠಿರರನ್ನೂ ಮೀರಿಸಿದ ಕೀರ್ತಿವಂತನಾಗುವ ಆಸೆ. ಆದ್ದರಿಂದಲೇ ಯಯಾತಿ ೮೦೦ ಅಶ್ವಮೇಧಿ ಕುದುರೆಗಳನ್ನು ಹೊಂದಿಸಲು ತನಗೆ ಆಗದು, ಚಕ್ರವರ್ತಿ ಮಾತೆಯಾಗುವ ಸೌಭಾಗ್ಯವತಿ ತನ್ನ ಮಗಳು ಎಂದು ಗಾಲವನಿಗೆ ಹೇಳಿ ಅವಳಿಂದ ಹೇಗಾದರೂ ಗುರುದಕ್ಷಿಣೆಯನ್ನು ಪೂರೈಸಿಕೋ ಎನ್ನುತ್ತಾನೆ, ತನ್ನ ಮಗಳ ಅಭಿಪ್ರಾಯದ ಅಗತ್ಯ ಕಂಡು ಬರುವುದಿಲ್ಲ ಆ ಮಹಾರಾಜನಿಗೆ, ಮಾಧವಿಗೆ ಆ ಕ್ಷಣದಲ್ಲಿ ವಿಷಯದ ಸ್ಪಷ್ಟತೆಯೂ ಇರುವುದಿಲ್ಲ. ಎಲ್ಲರನ್ನೂ ಮೀರಿಸಿದ ದಾನಿ ತಾನಾಗಬೇಕು ಎಂಬುದಷ್ಟೇ ಆತನಿಗೆ ಪ್ರಮುಖ ವಿಷಯವಾಗಿರುತ್ತದೆ. ಮಾರೀಚ ಎಂಬ ಋಷಿ ಬೇರೆ ಬೇರೆ ರಾಜರ ಬಳಿ ಮಾಧವಿ ಇರಬೇಕಾಗಿ ಬಂದರೆ ಯಯಾತಿಯ ಗೌರವ ಕುಂದುತ್ತದೆ ಎಂದಾಗಲೂ ಆತ ತಲೆಕೆಡಿಸಿಕೊಳ್ಳುವುದಿಲ್ಲ. ಮಗಳ ವ್ಯಕ್ತಿತ್ವವನ್ನು ತಾನೇ ಕೈಯಾರೆ ಹೊಸಕಿಹಾಕಿದೆನೆಂದು ಒಮ್ಮೆಯೂ ಅನಿಸುವುದಿಲ್ಲ. ಮಗಳ ಒಳಿತಿಗಾಗಿ ವಿಶ್ವಾಮಿತ್ರನ ಬಳಿ ಸಂಧಾನ ಮಾಡಬಹುದೆಂದು ಸೂಚಿಸಿದಾಗಲೂ ಆತ ವಿಚಲಿತನಾಗದೆ ಅದು "ಕರ್ಮಭ್ರಷ್ಟತೆ" ಆಗುವುದೆಂಬ ನೆಪ ನೀಡುತ್ತಾನೆ. ಮಗಳ ಮನಸ್ಸಿನ ತಳಮಳಕ್ಕಿಂತ ಲೋಕ ತನ್ನನ್ನು ಹರಿಶ್ಚಂದ್ರ, ಕರ್ಣರನ್ನೂ ಮೀರಿಸಿದ ದಾನಿ ಎಂದು ಕರೆಯುತ್ತದೆಯೇ ಎಂಬುದೇ ಮುಖ್ಯವಾಗಿರುತ್ತದೆ ಆತನಿಗೆ.

ನಂತರವೂ ಸಹ ೩ ರಾಜರ ಬಳಿ, ಕಡೆಯಲ್ಲಿ ಗಾಲವನ ಗುರು ವಿಶ್ವಾಮಿತ್ರನ ಬಳಿ ಇದ್ದು ಗಾಲವನ ಗುರುದಕ್ಷಿಣೆ ಪೂರೈಸಿದ ಪುತ್ರಿಯ "ಸ್ವಯಂವರ" ಏರ್ಪಡಿಸುವುದು ನೋಡುವವರಿಗೆ ತನ್ನ ರಾಜವೈಭವವನ್ನು ನೆನಪಿಸಲು. ವಿಶ್ವಾಮಿತ್ರನನ್ನು ಸಂಧಿಸಿದಾಗ "ಶಿಷ್ಯನ ಪರೀಕ್ಷೆಯ ಜೊತೆ ನನ್ನ ಪರೀಕ್ಷೆಯನ್ನೂ ತೆಗೆದುಕೊಂಡಿರಿ, ತಮ್ಮ ದಯೆಯಿಂದ ಗೆದ್ದೆ —" ಎನ್ನುವಾಗಲೂ ಹೆಮ್ಮೆಯ ಲೇಪವಿರುತ್ತದೆ ಅವನ

ಮಾತುಗಳಲ್ಲಿ ಒಮ್ಮೆಯೂ ತಾನು ತಂದೆಯ ಕರ್ತವ್ಯದಿಂದ ವಿಮುಖನಾಗಿ ತನ್ನ ಮಗಳ ವ್ಯಕ್ತಿತ್ವ, ಆಕೆಯ ಆಸೆ–ಆಕಾಂಕ್ಷೆಗಳನ್ನು ಮಣ್ಣುಗೂಡಿಸಿದೆ ಎಂಬ ಪಶ್ಚಾತ್ತಾಪದ ಎಳೆಯೂ ಕಾಡುವುದಿಲ್ಲ–ಆಶ್ರಮವಾಸಿ ದಾನವೀರ, ಕರ್ಮನಿಷ್ಟ ಮಹಾರಾಜ ಯಯಾತಿಗೆ.

ಗಾಲವನ ಬಗ್ಗೆ ಮಾಧವಿಯಿಂದಲೇ ಹೇಳಿಸಿಬಿಟ್ಟಿದ್ದಾರೆ ಲೇಖಕರು. ಒಂದೊಮ್ಮೆ ಮಾಧವಿಯಿಂದ ಚಕ್ರವರ್ತಿ ಪುತ್ರನನ್ನು ಪಡೆವ ಆಸೆ ಆತನ ಮನದಲ್ಲಿ ಅಂಕುರಿಸಿದರೂ "ಕರ್ತವ್ಯ" ಎಂದು ಮಾಧವಿಯನ್ನು ರಾಜರ ಬಳಿ ಕುದುರೆಗಳಿಗಾಗಿ ನಿರ್ದಿಷ್ಟ ಅವಧಿಯವರೆಗೆ ಬಿಟ್ಟು ಬರುವ ವ್ಯಾವಹಾರಿಕ ಕುಶಲತೆ ಗಾಲವನದು. ಮಾಧವಿಯಿಂದ ವಚನಭ್ರಷ್ಟನಾಗದೆ ಇರುವಂತಾಯಿತೆಂದೂ, ಅವಳಿಗೆ ತಾನು ಬಹಳ ಕೃತಜ್ಞನೆಂದೂ, ತಾನು ಅವಳ ಸುಖವನ್ನೇ ಸದಾ ಬಯಸುವವನೆಂದೂ, ಅವಳು ಬೇರೆ ರಾಜರ ಬಳಿ ಇರುವುದು ತನಗೆ ನೆನೆಯಲೂ ಶಕ್ಯವಲ್ಲ........ ಇತ್ಯಾದಿಯಾಗಿ ಆಲಾಪಿಸುತ್ತಾ ಇದ್ದವ ಕಡೆಯಲ್ಲಿ ಯೌವನವನ್ನೆಲ್ಲ, ಆ ಮೂಲಕ ಕದಿರೆಯದ ಕನಸುಗಳನ್ನೂ ಕಳೆದುಕೊಂಡ ಮಾಧವಿಯನ್ನು ಗುರುವಿನ ಬಳಿ ಇದ್ದು ಬಂದವಳೆಂದು ನಿರಾಕರಿಸಿಬಿಡುತ್ತಾನೆ.

ಆಕೆ ಎಲ್ಲಿ ರಾಜ ವೈಭೋಗಕ್ಕೆ, ರಾಜನಿಗೆ ಮರುಳಾಗಿ ತನ್ನ ಪ್ರತಿಜ್ಞೆಗೆ ಭಂಗ ಬರುವುದೋ ಎಂದೇ ಸದಾ ವ್ಯಾಕುಲನಾಗಿರುತ್ತಿದ್ದ ಗಾಲವ ಅದನ್ನೇ "ಪ್ರೇಮ" ಎಂದು ತಿಳಿದಿರುತ್ತಾನೆ. ವಾಸ್ತವವಾಗಿ ಮಾಧವಿ ಹೇಳಿದಂತೆ ಗಾಲವ ತನ್ನನ್ನೇ ತಾನು ಪ್ರೀತಿಸುವವನು ಎಳೆಯ ಮಗುವನ್ನು ಬಿಟ್ಟು ಬಂದ ಮಾಧವಿಯ ಮಾತೃಹೃದಯ ತನ್ನ ಎಳೇ ಕಂದನನ್ನು ನೆನೆದು ಪರಿತಪಿಸುತ್ತಿರುವಾಗ, "ಹೆಂಗಸರು ಸಾಹಸಪೂರ್ಣವಾದ ಯಾವ ಕೆಲಸವನ್ನೂ ಮಾಡದಿರುವುದಕ್ಕೆ, ಯಾವುದೇ ದೊಡ್ಡ ಕೆಲಸದ ಹೊಣೆಯನ್ನು ಹೊರದಿರುವುದಕ್ಕೆ ತಾಯ್ತನವೆ ಕಾರಣವಿರಬಹುದು" ಎಂದು "ಹೊಣೆಗಾರಿಕೆ" ಯನ್ನು ಕುರಿತು ವಿಶ್ಲೇಷಿಸುವ "ಭವಿಷ್ಯದ ಋಷಿ" ಗಾಲವ ಅವಳ ತಾಯ್ತನವೇ ತನ್ನ ಸಾಧನೆಯ ಬಂಡವಾಳ ಎಂಬುದನ್ನು ಮರೆತೇ ಬಿಟ್ಟಿರುತ್ತಾನೆ ಆ ಮುನಿಕುಮಾರ. ತಾರುಣ್ಯ ಕಳೆದುಕೊಂಡು ವಯಸ್ಸಾದಂತೆ ಕಾಣುತ್ತಿರುವ ಮಾಧವಿ ಪುನಃ ವ್ರತದಿಂದ ಕನ್ಯತ್ವ ಧರಿಸಲಿಚ್ಛಿಸುತ್ತಿಲ್ಲ ಎಂದು ತಿಳಿದ ತಕ್ಷಣ "ನೀನು ರಾಜಕನ್ಯೆ ಯಾವ ರಾಜನನ್ನು ಬೇಕಾದರೂ ವರಿಸಿಕೋ ನೀನು ಸರ್ವ ಸ್ವತಂತ್ರಳು, ನಿನಗೆ ನಾನು ಜನ್ಮಜನ್ಮಾಂತರದಲ್ಲಿಯೂ ಕೃತಜ್ಞ" ಇತ್ಯಾದಿಯಾಗಿ ಹೇಳುತ್ತಾನೆ. "ಗುರು ದಕ್ಷಿಣೆ" ಯ ಬಂಧನದಿಂದ ತನ್ನನ್ನು ಮುಕ್ತಿಗೊಳಿಸಿದ ಮಾಧವಿಯ ಮನದಾಳವನ್ನರಿಯುವ ಗೋಜಿಗೇ ಹೋಗುವುದಿಲ್ಲ.

ಆದರೆ ವಾಸ್ತವವಾಗಿ ಗಾಲವ ಸ್ವತಃ ಅಸ್ವತಂತ್ರನಾಗಿರುತ್ತಾನೆ, ಕರ್ತವ್ಯ ಪಾರಾಯಣತೆ, ವಚನಪೂರೈಕೆ........ಇತ್ಯಾದಿ ನೀತಿನಿಯಮಗಳಿಂದ ತನ್ನನ್ನು ತಾನು ಕಟ್ಟಿಹಾಕಿಕೊಂಡ "ನಿಷ್ಠಾವಂತ ಸಾಧಕ" ನಂತೆ ಕಂಡು ಬಂದಿದ್ದ ಗಾಲವ ತನ್ನ ಸ್ವಾರ್ಥ ಸಾಧನೆಗೆ ಬಳಸಿಕೊಂಡ ಮಾಧವಿಯ ಪ್ರೇಮವನ್ನು ಕಡೆಗೂ ಅರ್ಥಮಾಡಿಕೊಳ್ಳುವುದಿಲ್ಲ. ಗುರುವಿನ ಪರೀಕ್ಷೆಯಲ್ಲಿ ಗೆದ್ದು, ಎಲ್ಲರಿಂದಲೂ ಪ್ರಶಂಸಿಸಲ್ಪಟ್ಟು, ದೀಕ್ಷೆಯನ್ನೂ ಪಡೆಯುವ ಆ ಮುನಿಕುಮಾರ ಮಾಧವಿ ಒಡ್ಡಿದ ಪರೀಕ್ಷೆಯಲ್ಲಿ ಸೋತು ಹೋಗುತ್ತಾನೆ. ತನ್ನ ವ್ರತದಿಂದ ಶರೀರಕ್ಕೆ ತಾರುಣ್ಯ ಬಂದರೂ, ಮಾನಸಿಕವಾಗಿ ವೃದ್ಧೆಯಾಗಿರುವ ತನ್ನನ್ನು ಅವನು ಮದುವೆಯಾಗುವುದು ತನಗೆ ಬೇಕಿಲ್ಲ ಎಂಬ ನಿಲುವಿನ ಮಾಧವಿಯ ಗಾಢ ಪ್ರೇಮಕ್ಕೆ ಆತ ಅನರ್ಹನಾಗುತ್ತಾನೆ.

ದಾನವೀರ ತಂದೆ, ಆದರ್ಶ ಶಿಷ್ಯ ಗಾಲವ ಈ ಇಬ್ಬರ ಸಾಧನೆಗೆ ತನ್ನನ್ನೇ ಅರ್ಪಿಸಿಕೊಂಡರೂ "ಮೋಹವಶಳು, ದುರ್ಬಲ ಸ್ತ್ರೀ, ಚಂಚಲೆ ಎಂಬ ಪಟ್ಟ ಪಡೆದೆ" ಎಂದು ನೊಂದುಕೊಳ್ಳುವ ಮಾಧವಿಗೆ ಶಿಷ್ಟಾಚಾರ, ಕರ್ತವ್ಯ ನಿಷ್ಠೆಯ ಬಗ್ಗೆ ವ್ಯಾಖ್ಯಾನ ನೀಡುತ್ತಾನೆ ಗಾಲವ. ಆದರೆ ಅವಳಿಗಾಗಲೆ ಜೀವನದ ಕಟುವಾಸ್ತವದ ಅನುಭವ ಚೆನ್ನಾಗಿ ಆಗಿರುತ್ತದೆ. ಹೆಣ್ಣಿಗೆ ತಾಯ್ತನ ಎಷ್ಟು ಅಗತ್ಯವೋ ಪುತ್ರಸಂತಾನವೂ ಅಷ್ಟೇ ಅಗತ್ಯ. ಇಲ್ಲದಿದ್ದರೆ ಅವಳನ್ನು

ಸಮಾಜ-ಪರಿಸರ, ಯಾವ ರೀತಿ ಹೀನವಾಗಿ ಕಾಣುತ್ತದೆಂಬುದನ್ನು ಕೂಡಾ ಅರ್ಥೈಸಿಕೊಂಡಿರುತ್ತಾಳೆ. ಸಂತಾನವಿಲ್ಲದ ರಾಣಿಯರು ಅರಮನೆಯಲ್ಲಿದ್ದೂ ಅನಾಥೆಯರಂತಿದ್ದರೆ, ಹೆತ್ತ ಮಗುವನ್ನು ಲಾಲಿಸಲು ಸಾಧ್ಯವಾಗದೆ ಶಿಷ್ಯನೊಬ್ಬನ "ಗುರುದಕ್ಷಿಣೆ" ಗೆ ದಿಕ್ಕುದೆಸೆಯಿಲ್ಲದೆ ಅಲೆವ ಪರಿಸ್ಥಿತಿ ಮಹಾರಾಜನ ಕುಮಾರಿಗೆ. ಗಂಡು ಮಕ್ಕಳನ್ನು ಪಡೆಯುವುದು ವಂಶಕ್ಕೆ, ತನಗೆ ಶ್ರೇಷ್ಠತೆ ಅದಕ್ಕಾಗಿ ಪುರುಷ ಏನು ಮಾಡಿದರೂ ಸರಿ, ಎಂಥ ಸಂದರ್ಭದಲ್ಲೂ ತ್ಯಾಗ, ಸಹನೆಗಳೇ ಹೆಣ್ಣಿಗೆ ಭೂಷಣ. ವಂಶೋದ್ಧಾರವೇ ಅವಳ ಕರ್ತವ್ಯ........ ಇವೇ ಮುಂತಾದ ಪುರುಷ ಪ್ರಧಾನ —ಅನುಕೂಲ ಸಿಂಧು ನೀತಿಗಳು ಎದ್ದು ಕಾಣುತ್ತವೆ. "ಚಕ್ರವರ್ತಿಯ ಜನನಿ" ಯಾಗುವ ಎಲ್ಲ "ಸುಲಕ್ಷಣಗಳ ಭಾಗ್ಯವಂತೆ" ಮಾಧವಿ ಅದೇ ಕಾರಣಕ್ಕಾಗಿ ಹೆರುವ ಯಂತ್ರವಾಗಿ, ನಿರ್ಭಾಗ್ಯಳಾಗಿ ಮೊದಲಿನ ಅಂಕಗಳಲ್ಲಿ ಸಾಗುತ್ತಾಳೆ.

ರಾಜ ಪುರೋಹಿತ ಮಾಧವಿಯ ಲಕ್ಷಣಗಳ ಪರಿಶೀಲನೆ ನಡೆಸುತ್ತಿರುವ ಸಂದರ್ಭದಲ್ಲಿ ಅವಳ ಸ್ವರ ಪರೀಕ್ಷೆ ಬಯಸಿದಾಗ, "........ಇದಾವ ಜನ್ಮದ ವೈರವನ್ನು ನೀನು ತೀರಿಸಲು ಬಂದಿರುವೆ? ಇಂತಹ ಫಲ ಉಣ್ಣಲು ನಾನೇನು ಪಾಪ ಮಾಡಿದ್ದೆ!" ಎನ್ನುವ ಆಕೆಯ ನೋವಿಗೆ ಸ್ಪಂದಿಸುವವರೇ ಇರುವುದಿಲ್ಲ. ಮುಂದೆ ಹರ್ಯಶ್ವ ರಾಜನ ಬಳಿ ಮಗುವನ್ನು ಬಿಟ್ಟು ಬಂದಾಗಲೂ ಮುಂದೆ ಹುಟ್ಟಲಿರುವ ಮಗುವಿನ ರೋದನವನ್ನು ಊಹಿಸಿಕೊಂಡು "ಓ ಗಾಲವಾ ನೀನಿದಾವ ಬೇಗೆಯಲ್ಲಿ ನನ್ನನ್ನು ಬೇಯಿಸುತ್ತಿದ್ದೀ ನಾನು ನಿನಗೇನು ಕೆಡುಕು ಮಾಡಿದ್ದೆ? ನಾನು ನನ್ನ ತಂದೆಗೆ ಏನು ಮಾಡಿದ್ದೆ?" ಎಂದು ಸಂಕಟದಿಂದ ತಳಮಳಿಸಿದಾಗಲೂ ಆಕೆಗೆ ಸಾಂತ್ವನ ನೀಡುವವರಿರುವುದಿಲ್ಲ. ಆಗಾಗ ಅವಳ ಇಚ್ಛೆಯನ್ನೂ ಮೀರಿ ತಾಯ್ತನದ ಪ್ರಜ್ಞೆ ಜಾಗೃತಗೊಂಡರೂ ಅದು ಹೆಮ್ಮರವಾಗಿ ಬೆಳೆಯದಂತೆ ಸಾಧನೆ. ಕರ್ತವ್ಯ ನಿಷ್ಠೆ........ ಇತ್ಯಾದಿಗಳ ಬೋಧನೆಯಿಂದ ಅದನ್ನು ಅಲ್ಲೇ ಮೊಟಕುಗೊಳಿಸುವಲ್ಲಿ ಯಶಸ್ವಿಯಾಗುತ್ತಾನೆ ಗಾಲವ. ತನ್ನ ಋಣಭಾರ ಕಳೆದ ನಂತರ ತಾವಿಬ್ಬರೂ ಸ್ವತಂತ್ರರೆಂಬ ಗಾಲವನ ಮಾತಿಗೆ ಮರುಳಾಗಿರುತ್ತಾಳೆ. ಆತನ ಆತ್ಮೀಯತೆ, ಸ್ನೇಹಕ್ಕೆ ಸ್ವಾರ್ಥಲೇಪವಿದ್ದುದು ಆಕೆಗೆ ಕಡೆಯವರೆಗೂ ಗೋಚರಿಸುವುದಿಲ್ಲ. ತಾನು ಆತನನ್ನು ಪ್ರೇಮಿಸುತ್ತಿರುವಂತೆ ತನ್ನನ್ನು ಅವನೂ ಪ್ರೇಮಿಸುತ್ತಿದ್ದಾನೆ ಎಂದೇ ತಿಳಿದು ಗಾಲವನಿಗೂ ತಿಳಿಸದೆ ವಿಶ್ವಾಮಿತ್ರನ ಬಳಿಗೂ ನಡೆಯುತ್ತಾಳೆ. ಆತನ ವಚನ ಪೂರೈಕೆಗೆ ತನ್ನನ್ನೇ ಅರ್ಪಿಸಿಕೊಳ್ಳುತ್ತಾಳೆ. ಶಿಷ್ಯನ ಪ್ರೇಯಸಿ ಎಂದು ತಿಳಿದಿದ್ದರೂ ಮಾಧವಿಯನ್ನು ಸ್ವೀಕರಿಸುವ ವಿಶ್ವಾಮಿತ್ರ ಆಕೆಯ ಸೌಂದರ್ಯ, ವ್ಯಕ್ತಿತ್ವಗಳ ಎದುರು ಸೋಲೊಪ್ಪಿಕೊಳ್ಳುತ್ತಾನೆ.

"ಮಹಾದಾನಿ" ಬಿರುದಿಗೆ ಹಾತೊರೆಯುತ್ತಿದ್ದ ತಂದೆ ಹಾಗೂ ಅಸಾಧ್ಯವಾದ "ಗುರುದಕ್ಷಿಣೆ" ಸಲ್ಲಿಸಿದ ಶಿಷ್ಯ ಈ ಇಬ್ಬರ ಸ್ವಾರ್ಥಲೇಪಿತ ಸಾಧನೆಯ ಹಾದಿಯಲ್ಲಿ ಮಾಧ್ಯಮವಾಗಿ ಬರುವ ಮಾಧವಿಯೇ "ತ್ಯಾಗ" ದ ಪ್ರತಿರೂಪವಾಗಿ ಸ್ತ್ರೀತ್ವದ ಸ್ಥಾನದಲ್ಲಿ ನಿಲ್ಲುತ್ತಾಳೆ. ಕಡೇ ಅಂಕದಲ್ಲಿ ಸಂಪೂರ್ಣ ಜೀವ ತುಂಬಿಕೊಂಡು ಉಳಿದೆಲ್ಲ ಪಾತ್ರಗಳ ಒಳ ಹೊರಗನ್ನು ಒರೆಗಲ್ಲಿಗೆ ಹಚ್ಚಿ, ಅವುಗಳ ಸತ್ವವನ್ನು ಅಳೆವ ಅಳತೆಗೋಲಂತೆ ಕಂಡು ಬರುತ್ತದೆ. ಮಾಧವಿ ಹೆತ್ತ ಮಕ್ಕಳನ್ನೇ ಮುಂದುಮಾಡಿ ಆಕೆಯ ತಾಯ್ತನವನ್ನು ಜಾಗೃತಿಗೊಳಿಸಿ ಮಕ್ಕಳಾಸೆಯಿಂದಾದರೂ ತಮ್ಮನ್ನು ವರಿಸಲೆಂದು ಕಾತರಿಸುವ ರಾಜರು ಈ ಹಿಂದೆ ಆಕೆಯ ನವಜಾತ ಶಿಶುವನ್ನು ನಿಷ್ಕರುಣೆಯಿಂದ ಸೆಳೆದುಕೊಂಡಿದ್ದರು. ತಾರುಣ್ಯ ಕಳೆದುಕೊಂಡವಳೆಂಬ ಕಾರಣದಿಂದ ಆಕೆಯಿಂದ ದೂರವಾದ ಗಾಲವ, ದಾನಶೂರ ತಂದೆ, ಆ ರಾಜರು ಎಲ್ಲರೂ ಆಕೆಗೆ ಋಣಿಗಳೇ. ತನ್ನ ಹೃದಯದಾಸೆಗಳನ್ನೆಲ್ಲ ಕಳೆದುಕೊಂಡೂ, ಎಲ್ಲ ರೀತಿಯ ಮಾನಸಿಕ ದೌರ್ಬಲ್ಯವನ್ನು ಮೆಟ್ಟಿ ಬೆಳೆವ ಆಕೆಯ ವ್ಯಕ್ತಿತ್ವ ಗಟ್ಟಿಯಾಗುತ್ತಾ ಹೋದಂತೆ ಉಳಿದ ಪಾತ್ರಗಳು ಕುಬ್ಜವಾಗಿ ಕಂಡು ಬರುತ್ತವೆ. ಸೂತ್ರದ ಬೊಂಬೆಯಂತೇ ಪರರ ಇಚ್ಛೆಯಂತೇ ಹೆಜ್ಜೆಯಿಡುತ್ತಾ ಬಂದಿದ್ದ ಮಾಧವಿ ತಾನು ಸದಾ ಬಯಸುತ್ತಿದ್ದ ಸ್ವಾತಂತ್ರ್ಯವನ್ನು ಪಡೆಯುತ್ತಾಳೆ. ಎಲ್ಲರಿಂದ ದೂರ ಸಿಡಿದು ನಿಂತು ಆ ಮೂಲಕ ಯಾರ ಆಸರೆಯಿಲ್ಲದೆಯೂ ಹೆಣ್ಣು ಬದುಕಲು ಒಲ್ಲಳು ಎಂದು ಸಾಧಿಸಿ ತೋರಿಸಲು ಹೊರ

ಉದ್ಯೋಗ : ಸಮಸ್ಯೆಗಳು

ಉಜ್ವಲಾ ಪುಣಜಗೌಡ
ಬೆಳಗಾವಿ

ಇಂದು ಎಲ್ಲ ಹೆಣ್ಣುಮಕ್ಕಳು ನೌಕರಿಯ ಕನಸು ಕಾಣುತ್ತಿದ್ದಾರೆ. ಆರ್ಥಿಕ ಸ್ವಾತಂತ್ರ್ಯದತ್ತ ತಮ್ಮ ಒಲವನ್ನು ತೋರಿಸುತ್ತಿದ್ದಾರೆ. ಬೆಳಿಗ್ಗೆ ಗಂಡನಿಂದ ಪಡೆದ ಹಣಕ್ಕೆ ಸಂಜೆ ಪೈಸೆ-ಪೈಸೆಯ ಲೆಕ್ಕವನ್ನು ಒಪ್ಪಿಸುವ ಹಿಂಸೆಗಿಂತ ತನ್ನದೇ ಆದ ಹಣವನ್ನು ಗಳಿಸಿ ಆತ್ಮಸಮ್ಮಾನವನ್ನು ಉಳಿಸಿಕೊಳ್ಳುವುದಷ್ಟೇ ಉದ್ದೇಶವಾಗಿರದೆ, ಇಂಥ ತುಟ್ಟಿ ಕಾಲದಲ್ಲಿ ಸಂಸಾರ ರಥವನ್ನು ಎಳೆಯುವುದರಲ್ಲಿ ನೆರವಾಗುವುದೂ ಕೂಡ ಆಗಿದೆ.

ಅಡಿಗೆಯ ಕೆಲಸವು ಹೆಣ್ಣಿನ ಜನ್ಮಸಿದ್ಧ ಹಕ್ಕು ಎಂದು ತಿಳಿದ ಪುರುಷರು ಇರುವಂತಹ ಸಮಾಜದಲ್ಲಿ, ಕೆಲಸಕ್ಕೆ ಜನರು ಸಿಗದಂತಹ, ಸಿಕ್ಕರೂ ಅವರನ್ನು ಪೂರ್ತಿ ನಂಬುವ ಪರಿಸ್ಥಿತಿ ಇಲ್ಲದಿರುವಾಗ ಮಹಿಳೆ ಉದ್ಯೋಗಸ್ಥಳಾಗಿ ಸುಖವಾಗಿರಬಲ್ಲಳೇ? ಅಥವಾ ಮನೆ, ಉದ್ಯೋಗ ಎರಡನ್ನೂ ನಿಭಾಯಿಸಬಲ್ಲಳೇ? ಹಗಲಿನ ಹನ್ನೆರಡು ತಾಸುಗಳೇ ಮನೆ ಕೆಲಸಕ್ಕೆ ಸಾಕಾಗದಿರುವಾಗ ಎಂಟುಗಂಟೆ ಆಫೀಸಿನಲ್ಲಿ ಕಳೆಯಬಲ್ಲಳೇ? ಎಂಬ ಸಂಶಯ ತಲೆ ದೋರುತ್ತದೆ. ನಮ್ಮಲ್ಲಿಯ ಬಹುತೇಕ ಉದ್ಯೋಗಗಳು ಬೆಳಗಿನಿಂದ ಸಂಜೆಯವರೆಗಿನ ಸಮಯವನ್ನು ಕಬಳಿಸುವಂಥವು. ಇದರಿಂದಾಗಿ ಕುಟುಂಬದ ಜವಾಬ್ದಾರಿ ಹೆಚ್ಚಿದಾಗ ಮಹಿಳೆಯರು ಕೆಲಸ ಮಾಡುವ ಆಸಕ್ತಿಯನ್ನು ಕಳೆದುಕೊಂಡು ಬಿಡುತ್ತಾರೆ. ಕುಟುಂಬದ ಬೇರೆ ಸದಸ್ಯರೂ ಕೂಡಾ ಕೆಲಸ ಬಿಡಲು ಒತ್ತಾಯಿಸುತ್ತಾರೆ. ಬಹಳ ಡಿಮ್ಯಾಂಡ್ ಇರುವ ಉದ್ಯೋಗಗಳನ್ನು ಬಿಟ್ಟು ಮನೆಯಲ್ಲಿ ಕುಳಿತ ಅನೇಕ ಪದವೀಧರೆಯರು, ಸ್ನಾತಕೋತ್ತರ ಪದವೀಧರೆಯರು ನಮಗೆ ಸಿಗುತ್ತಾರೆ. ನನಗೆ ಗೊತ್ತಿದ್ದಂತೆ ಇದೇ ಕಾರಣಕ್ಕಾಗಿ ನೌಕರಿ ಬಿಟ್ಟು ಮಹಿಳಾ ಇಂಜಿನಿಯರ್‌ಗಳು, ವಕೀಲರೂ ನನ್ನ ಗೆಳತಿಯರಲ್ಲಿದ್ದಾರೆ. ಇಂಥವರಿಗಾಗಿ ಪಾರ್ಟ್ ಟೈಂ ಉದ್ಯೋಗಗಳು ಇದ್ದರೆ ಅನುಕೂಲವಾಗುತ್ತದೆ. ವಿದ್ಯೆಯ ಉಪಯೋಗವೂ ಆಗುತ್ತದೆ.

ಇನ್ನು ಬೇರೆ ಊರಿನಲ್ಲಿ ಉದ್ಯೋಗ ಮಾಡಬೇಕಾದ ಹೆಣ್ಣು ಮಕ್ಕಳಿಗಂತೂ ನಮ್ಮಲ್ಲಿ ಯಾವುದೇ ವ್ಯವಸ್ಥೆ ಇಲ್ಲ. ಇಂಥ ಮಹಿಳೆಯರಿಗಾಗಿ ಕೆಲವು ಹಾಸ್ಟೆಲ್‌ಗಳಿದ್ದರೂ ಅಲ್ಲಿ ಅವಶ್ಯಕತೆ ಇದ್ದ ಮಹಿಳೆಯರಿಗಿಂತ ಅವಶ್ಯಕತೆ ಇಲ್ಲದ ಮಹಿಳೆಯರು, ವಿದ್ಯಾರ್ಥಿನಿಯರು ಸೇರುವ ಸಂಭವವಿದೆ. ಇಂಥ ಹಾಸ್ಟೆಲ್ಲುಗಳ ಖರ್ಚು ಕೂಡ ಜಾಸ್ತಿಯಾಗಿರಬಹುದಲ್ಲದೇ ಇಂಥ ಹಾಸ್ಟೆಲ್ಲುಗಳಲ್ಲಿ ವಾಸಿಸುವ ಹುಡುಗಿಯರನ್ನು ವಕ್ರದೃಷ್ಟಿಯಿಂದ ನೋಡುವ ಜನರೂ ಇದ್ದಾರೆ. ಅಲ್ಲೊಂದು ಇಲ್ಲೊಂದು ಹಾಸ್ಟೆಲ್‌ಗಳಿರುವುದರಿಂದ ಹೆಚ್ಚೇನೂ ಸಹಾಯವಾಗುವುದಿಲ್ಲ.

ಹೆಚ್ಚಿನ ಸಂಶಯ ಪ್ರವೃತ್ತಿಯ ಪತಿ ಇದ್ದರಂತೂ ನೌಕರಿ ಮಾಡುವ ಹೆಣ್ಣಿನ ಜನ್ಮ ನರಕವಾಗುತ್ತದೆ. ಉದ್ಯೋಗ ಎಂದಮೇಲೆ ನಾಲ್ಕಾರು ಜನರೊಡನೆ ಮಾತುಕತೆ, ನಗು, ಹರಟೆ ಅನಿವಾರ್ಯವಾಗುತ್ತದೆ. ಪ್ರತಿಯೊಂದರ ಮೇಲೆ ನಿಗಾ ಇಟ್ಟು, ಅನಾವಶ್ಯಕ ನಿಬಂಧನೆಗಳನ್ನು ಹೇರಿದರೆ ಅವಳ ಬದುಕು ಅಸಹನೀಯವಾಗುತ್ತದೆ. ಮನೆಯಲ್ಲಿ ಅತ್ತೆ-ಮಾವ ಇದ್ದರೆ ಅವರು ಕೂಡ ಅಂತಃಕರಣವುಳ್ಳವರಾಗಿದ್ದರೆ ಒಳ್ಳೆಯದು, ಇಲ್ಲದಿದ್ದರೆ ಪ್ರತಿಯೊಬ್ಬರೂ ಅವಳನ್ನು ದುಡಿಯುವ, ಹಣಗಳಿಸುವ ಯಂತ್ರವೆಂದು ತಿಳಿದುಕೊಂಡರೆ ಕಷ್ಟವಾಗುತ್ತದೆ. ನಮ್ಮಲ್ಲಿ ಬಹುತೇಕ ಮಹಿಳೆಯರು ನೌಕರಿ ಮಾಡುವುದರಿಂದ ತಾವು ಆರ್ಥಿಕವಾಗಿ ಸ್ವತಂತ್ರರಾಗುತ್ತೇವೆ ಎಂದುಕೊಳ್ಳುತ್ತಾರೆ. ಆದರೆ ಸಂಬಳ ಬಂದ ದಿನವೇ ಅದನ್ನು ಕಸಿದುಕೊಳ್ಳುವ ಗಂಡ, ಅತ್ತೆ, ಮಾವಂದಿರಷ್ಟೇ ಅಲ್ಲ ಅಂಥ ತಂದೆ-ತಾಯಿ, ಅಣ್ಣಂದಿರೂ ಇದ್ದಾರೆ. ನೌಕರಿ ಮಾಡುವ ಮಹಿಳೆ ಉದ್ಯೋಗ, ಮನೆ ಹಾಗೂ ಬಸ್ಸು-ರೈಲು ಪ್ರಯಾಣದಲ್ಲಿ ಹೆಚ್ಚಿನ ಸಮಯವನ್ನು ಕಳೆದುಕೊಂಡು ಬಿಡುತ್ತಾಳೆ. ಮಕ್ಕಳು, ಮನೆ ಮಂದಿಯೊಂದಿಗೆ ಕೆಲವು ಸಂತಸದ ಕ್ಷಣಗಳನ್ನು ಕಳೆಯಲಾಗದಿರಬಹುದು. ಉದ್ಯೋಗ ಒಂದು ಅವಶ್ಯಕತೆಯಾಗುತ್ತಿರುವ ಈ ಸಂದರ್ಭದಲ್ಲಿ ಎಲ್ಲವೂ ಬದಲಾಗಬೇಕಾದ್ದು ಅನಿವಾರ್ಯ.

ಡುತ್ತಾಳೆ. ಇಷ್ಟು ಕಾಲ ಬೇರೆಯವರಿಗಾಗಿ ಬಾಳುತ್ತಿದ್ದು, ಭವಿಷ್ಯದಲ್ಲಿ ತನಗಾಗಿ ಬದುಕಲು ನಿಶ್ಚಯಿಸುವ ಆಶಾವಾದಿತ್ವ "ಮಾಧವಿ" ಯಲ್ಲಿ ಕಂಡು ಬರುತ್ತದೆ. ಭೀಷ್ಮ ಸಾಹನಿಯವರ "ಮಾಧವಿ" ನಾಟಕವನ್ನು ಗೊರೂರು ಶ್ರೀನಿವಾಸ ಮೂರ್ತಿಯವರು ಉತ್ತಮವಾಗಿ ಅನುವಾದಿಸಿದ್ದಾರೆ.

ಶ್ರೀಮತಿ.

"ಬಿಚ್ಚಿ ಕೊಂಡಿವೆ ಹಚ್ಚೆ ಬಳ್ಳಿಗಳು"

ಹಚ್ಚೆ ಬಳ್ಳಿಗಳು ಬಳಸಿ ಕಾಡ್ತಾವು
ಹಸಿ ತೇವ ಮಣ್ಣ ಹೆಜ್ಜೆ ಗುರುತಗಳಂತೆ
ನಾಟು ತೇರಿದ ಅಚ್ಚೊತ್ತ ಕನಸುಗಳ
ಏನಂತ ಉಸುರಲಿ ಗೆಣತಿ
ಆನೆಪ್ಪ ನ್ಯಾವರಿಕೆ

ಹೊಲದ ಬದುವ್ಯಾಗ ಪೊದೆಯ ನೆರಳಿಂದು
ಕೊಸರಿ ನಾಟಿತು ಹಿತದ ಮುಸಗ ನೋವು
ಕಪ್ಪು ಬಣ್ಣವ ಕಲಸಿ ಚುಚ್ಚುತ್ತಲೇ ಸೂಜಿಮೊನಿ
ನಕ್ಕು ಪಾಡಿದಳಲ್ಲ ಕೊಂಕು ನಾಡಿಯ ಹಚ್ಚೆಗಾತಿ

ಯಾರ ನೆಪ್ಪನು ಹನಿಸಿ ಹಸೆಯ ಬಿಡಿಸಲಿ ಹೆಣ್ಣೆ
ಸೀತ ಮಾತಾಯ ರವಿಕೆ ತೊಡಿಸಾಲೆ
ದ್ರೌಪತಾ ದ್ಯಾವಿಯ ಸೆರಗ ಹೊಚ್ಚ್ಯಾಲೆ
ಬ್ಯಾಡ ನಿನ್ನೂರ ಚೆಂಡೂವ ತೇರ ಎಳಿಯಾಲ

ಯಾತರವೂ ಬ್ಯಾಡಕ್ಕ
ನಂದಿ ನಲುಗವೆ ಮಾತು
ಮನಸ ಮೂಲ್ಯಾಗೆ
ಕೊಳ್ಳಿ ಹತ್ಯಾವು

ಜಾತ್ರೆ ಜನ ಸುದ್ದಡಗಿ ಕೇಳಿಕಿ ರಾಗದ
ಹಿಮ್ಯಾಳದಲೆಯ ಹಿಂದಲೇ ಬಂದು
ಸದ್ದಿಲ್ಲದೆ ಕೊರಳೊಂಕಿ ಜಡೆಯ ಎಳೆದವನ
ಕೆನ್ನೆ ಅಳ್ಳದಲ್ಲಿ ಮುತ್ತೊತ್ತಿ
ನಡಸುತ್ತಿ ಕಾವಳಿಸಿದ ಒರಟ ಕೈಯವನ
ನೆಲಗೀಚಿ ಸುಯ್ಯುತ್ತ ಕಾತರಿಸಿ ಬೆವರುತ್ತ
ಕಡಲಾಚೆ ಕಾಲುವೆ ದಡಹತ್ತಿ
ನನ್ನೂರ ದಿಕ್ಕಿಗೆ ಮುಕ ಮಾಡಿ ನಿಂತಿರುವ
ನನ್ನೊಳಗಲಿರುವನ ದಪ್ಪ ಮೀಸೆ ಅರಳಿಸುವೆಯಾ
ಕಣ್ಣಾಲಿಯಲಿ, ಉಳುಕುವವನ ಬಿಂಬ
ಹಚ್ಚುವೆಯಾ??

ಉತ್ತನೂರು ರಾಜಮ್ಮ ವಿ. ಶೆಟ್ಟಿ.

"ಸುರಕ್ಷಿತ ಮಾತೃತ್ವ ಮತ್ತು ಮಕ್ಕಳ ಸಂರಕ್ಷಣೆ"

ವಿಶ್ವಸಂಸ್ಥೆಯ ಮಕ್ಕಳ ನಿಧಿ—ಯುನಿಸೆಫ್ ರಾಜ್ಯದ ಮೂರು ಜಿಲ್ಲೆಗಳಲ್ಲಿ "ಮಕ್ಕಳನ್ನು ಉಳಿಸಿ ಮತ್ತು ತಾಯ್ತನ ಸಂರಕ್ಷಿಸಿ" ಯೋಜನೆಯನ್ನು ಆರಂಭಿಸಲು ಉದ್ದೇಶಿಸಿದೆ. ಹೆರಿಗೆಯ ಸಮಯದಲ್ಲಿ ತಾಯಿ–ಮಕ್ಕಳ ಮರಣವನ್ನು ತಡೆಯುವ ಉದ್ದೇಶವನ್ನು ಈ ಯೋಜನೆ ಹೊಂದಿದೆ.

ಈ ವರ್ಷದಿಂದಲೇ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಆರಂಭವಾಗುವ ಈ ಯೋಜನೆ ತುಮಕೂರು ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಬರುವ ಹಣಕಾಸು ವರ್ಷದಿಂದ ಜಾರಿಗೊಳ್ಳುವುದು. ಯುನಿಸೆಫ್‌ನ ವಲಯ ಪ್ರತಿನಿಧಿ ಶ್ರೀ.ಸಿ. ಸುರೇಶ್ ಭಾರ್ಗವ ಅವರು ಬೆಂಗಳೂರಿನಲ್ಲಿ ಈ ವಿಷಯವನ್ನು ವರದಿಗಾರರಿಗೆ ತಿಳಿಸಿದರು. ಮಕ್ಕಳ ಅಭಿವೃದ್ಧಿ ಬಗ್ಗೆ ಈಚೆಗೆ ನಡೆದ ವಿವಿಧ ರಾಷ್ಟ್ರಗಳ ನಾಯಕರ ಶೃಂಗ ಸಭೆಯ ನಿರ್ಣಯಗಳನ್ನು ಹಾಗೂ ವಿಶ್ವದ ಮಕ್ಕಳ ಸ್ಥಿತಿ–ಗತಿಗಳ ವರದಿಯನ್ನೂ ಅವರು ಪತ್ರಿಕೆಗಳಿಗೆ ಬಿಡುಗಡೆ ಮಾಡಿದರು. ಐದು ವರ್ಷಗಳಲ್ಲಿ ರಾಜ್ಯದ ಎಲ್ಲ ಜಿಲ್ಲೆಗಳಿಗೂ ವಿಸ್ತರಿಸಲ್ಪಡುವ ಈ ಯೋಜನೆಗೆ ಅಗತ್ಯವಾದ ಆರ್ಥಿಕ ನೆರವನ್ನು ಯುನಿಸೆಫ್ ನೀಡುತ್ತದೆ ಎಂದು ತಿಳಿಸಿದರು.

ಗ್ರಾಮೀಣ ಪ್ರದೇಶದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಯೋಜನೆ ಪ್ರಸ್ತುತ ರಾಜ್ಯದ ೪ ಜಿಲ್ಲೆಗಳಲ್ಲಿ ಜಾರಿಯಲ್ಲಿದೆ. ಇದನ್ನು ೮ ನೇ ಯೋಜನೆಯ ಅವಧಿಯಲ್ಲಿ ಮತ್ತೂ ೯ ಜಿಲ್ಲೆಗಳಿಗೆ ವಿಸ್ತರಿಸಲಾಗುವುದೆಂದು ಅವರು ನುಡಿದರು. ಸಮಗ್ರ ಬಾಲ ವಿಕಾಸ ಕಾರ್ಯಕ್ರಮದ ಜಾರಿಯಲ್ಲಿ ದಕ್ಷಿಣದ ಇತರ ರಾಜ್ಯಗಳಿಗಿಂತ ಕರ್ನಾಟಕ ಮುಂದಿದೆ ಎಂಬಂಶವನ್ನೂ ತಿಳಿಸಿದರು.

ಭಾರತದಾದ್ಯಂತ ಒಂದೇ ಸಮಯದಲ್ಲಿ "ಸುರಕ್ಷಿತ ಮಾತೃತ್ವ ಯೋಜನೆ" ಜಾರಿಯಾಗುತ್ತಿದೆ, ತಾಯಿ–ಮಗುವಿನ ಆರೋಗ್ಯ ರಕ್ಷಣೆ, ಪೌಷ್ಟಿಕ ಆಹಾರ ನೀಡಿಕೆ, ಸಾಕ್ಷರತೆ... ....ಮುಂತಾದ ಕಾರ್ಯಕ್ರಮಗಳನ್ನು ಮತ್ತಷ್ಟು ವಿಸ್ತರಿಸುವ ಉದ್ದೇಶವನ್ನು ಯುನಿಸೆಫ್ ಹೊಂದಿದೆ ಎಂದು ಹೇಳಿದರು.

ಯುನಿಸೆಫ್ ವರದಿ:– "ನೂತನ ಜಾಗತಿಕ ವ್ಯವಸ್ಥೆ ಜನ್ಮ ತಾಳುತ್ತಿರುವ ಈ ದಿನಗಳಲ್ಲಿ ಮಾನವ ಜನಾಂಗದ ಕಡು ಬಡವರ ಅಳಲು ವಿಶ್ವದೆಲ್ಲೆಡೆ ಕೇಳಬೇಕು" ಆ ದಿಕ್ಕಿನಲ್ಲಿ ವಿಶ್ವದ ಪ್ರಗತಿ ಹೊಂದಿದ ರಾಷ್ಟ್ರಗಳು ಹಾಗೂ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು ಪ್ರಯತ್ನಿಸಬೇಕು ಎಂದು ೧೯೯೨ ರ ಮಕ್ಕಳ ಸ್ಥಿತಿಗತಿ ವರದಿ ಕರೆ ನೀಡಿದೆ. ಜನಸಾಮಾನ್ಯರ ಮೂಲ ಅಗತ್ಯಗಳಿಗೆ ಮೊದಲು ಆದ್ಯತೆ ನೀಡಬೇಕು ಎಂದು ವಿವಿಧ ರಾಷ್ಟ್ರಗಳ ಧುರೀಣರಿಗೆ ವರದಿಯಲ್ಲಿ ಕರೆ ನೀಡಲಾಗಿದೆ. ವಿಶ್ವದ ಸುಮಾರು ೧೦೦ ಕೋಟಿ ಜನರಿಗೆ ಈಗಲೂ ಸಾಕಷ್ಟು ಆಹಾರ, ಉತ್ತಮ ಕುಡಿಯುವ ನೀರು, ಪ್ರಾಥಮಿಕ ಆರೋಗ್ಯ ಶಿಕ್ಷಣ ಸೌಲಭ್ಯಗಳು ದೊರೆಯದಿರುವ ಬಗ್ಗೆ ವರದಿಯಲ್ಲಿ ಆಂತಕ ವ್ಯಕ್ತ ಪಡಿಸಲಾಗಿದೆ.

ಕ್ರಿ. ಶ. ೨೦೦೦ ದ ಹೊತ್ತಿಗೆ ಶಿಶುಗಳು ಮತ್ತು ೫ ವರ್ಷದೊಳಗಿನ ಮಕ್ಕಳ ಮರಣದ ಸಂಖ್ಯೆಯನ್ನು ಪ್ರತಿ ನೂರು ಜನನಕ್ಕೆ ೫–೭ ರ ಪ್ರಮಾಣದಷ್ಟು ಕಡಿಮೆಗೊಳಿಸುವ ಗುರಿಯನ್ನು ಶೃಂಗ ಸಭೆ ನಿಗದಿ ಮಾಡಿದೆ. ಹೆರಿಗೆ ಸಮಯದಲ್ಲಿ ತಾಯಿಯರ ಮರಣದ ಸಂಖ್ಯೆಯನ್ನು ೧೯೯೦ ರಲ್ಲಿದ್ದ ಪ್ರಮಾಣದ ಅರ್ಧಕ್ಕೆ, ಇದೇ ಮಟ್ಟಕ್ಕೆ ಪೌಷ್ಟಿಕತೆಯ ಕೊರತೆಯ ಮರಣದ ಪ್ರಮಾಣವನ್ನು, ಅಯೋಡಿನ್ ಕೊರತೆ, ಎ ಅನ್ನಾಂಶ ಕೊರತೆ, ಮುಂತಾದುವನ್ನು ಪೂರ್ಣವಾಗಿ ತೊಲಗಿಸುವ ಗುರಿ ಹೊಂದಲಾಗಿದೆ.

ಸುರಕ್ಷಿತ ಕುಡಿಯುವ ನೀರು, ನೈರ್ಮಲ್ಯತೆ,

ಹೆರಿಗೆಯ ಕುರಿತಂತೆ ಸ್ತ್ರೀಯರಿಗೆ ಸಮಾಗ್ರ ಶಿಕ್ಷಣ, ಹೆಣ್ಣು ಮಕ್ಕಳ ಪೋಷಣೆಗೆ ವಿಶೇಷ ಗಮನ, ಮಕ್ಕಳ ಪ್ರಾಥಮಿಕ ಶಿಕ್ಷಣ ಕುರಿತು ವಿಶೇಷ ಆದ್ಯತೆಯ ಕಾರ್ಯಕ್ರಮಗಳನ್ನು ಈ ಅವಧಿಯಲ್ಲಿ ಹಮ್ಮಿಕೊಳ್ಳಬೇಕೆಂದು ಯುನಿಸೆಫ್‌ನ ವರದಿ ಸಲಹೆ ನೀಡಿದೆ. ಈ ಎಲ್ಲ ಗುರಿ ಸಾಧನೆಗಾಗಿ ೧೦ ಅಂಶಗಳ ಕಾರ್ಯಯೋಜನೆಯೊಂದನ್ನು ಸಿದ್ಧಪಡಿಸಲಾಗಿದೆ. ಶೃಂಗ ಸಭೆಯ ವಾಗ್ದಾನಗಳ ಈಡೇರಿಕೆ, ಮಕ್ಕಳಿಗೆ ಮೊದಲ ಆದ್ಯತೆ, ಕುಟುಂಬ ಯೋಜನೆ, ಜನೋಪಯೋಗಿ ಕಾರ್ಯಕ್ರಮಗಳಲ್ಲಿ ಬಂಡವಾಳ ಹೂಡುವಿಕೆ, ರಕ್ಷಣಾ ವೆಚ್ಚದಲ್ಲಿ ಕಡಿತ, ಆಫ್ರಿಕಾಕ್ಕೆ ಸಾಲದ ಹೊರೆಯಿಂದ ಮುಕ್ತಿ, ಲಿಂಗಭೇದ ವಿರೋಧ, ಹೊಣೆ ಅರಿತ ಹೆರಿಗೆ ಇವೇ ಮುಂತಾದವು ಈ ಕಾರ್ಯಕ್ರಮಗಳು.

10 ಲಕ್ಷ ಹೆಣ್ಣು ಭ್ರೂಣ ಹತ್ಯೆ:- ಲಿಂಗಭೇದದಿಂದ ಹತ್ಯೆಯಾಗುವ ಹೆಣ್ಣು ಮಕ್ಕಳ ಸಂಖ್ಯೆ ವರ್ಷಕ್ಕೆ ೧೦ ಲಕ್ಷಕ್ಕೂ ಅಧಿಕ ಎಂದು ಯುನಿಸೆಫ್ ವರದಿ ತಿಳಿಸಿದೆ. ಪ್ರತಿದಿನ ೫೦ ಸಾವಿರ ಅಕ್ರಮ ಭ್ರೂಣ ಹತ್ಯೆ, ಪ್ರತಿವಾರ ೨.೫೦ ಲಕ್ಷ ಶಿಶುಗಳ ಮರಣವಾದರೆ, ಸರಿಯಾದ ಆರೈಕೆ ಇರದೆ ಅನಾರೋಗ್ಯದಿಂದ ಅರೆಜೀವವಾಗಿ ಜೀವಿಸುತ್ತಿರುವ ಮಕ್ಕಳ ಸಂಖ್ಯೆ ಒಂದು ದಶಲಕ್ಷ ಎಂಬ ಅಂಶವನ್ನೂ ಯುನಿಸೆಫ್ ತಿಳಿಸಿದೆ ಈ ಸಾವು-ನೋವಿನ ಸಿಂಹಪಾಲು ತೃತೀಯ ಜಗದ ರಾಷ್ಟ್ರಗಳದು.

ಜನ ಸಾಮಾನ್ಯರಿಗೆ ಅತ್ಯವಶ್ಯಕವಾದ ಆರೋಗ್ಯ ಶಿಕ್ಷಣ ಕಾರ್ಯಕ್ರಮಗಳಿಗೆ ಬಡ ರಾಷ್ಟ್ರಗಳು ಖರ್ಚು ಮಾಡುವುದು ಶೇ. ೧೨ ರಷ್ಟು ಮಾತ್ರ. ಭಾರತದಲ್ಲಿ ಇದು ಶೇ. ೭ ರಷ್ಟು. ಅಂತರಾಷ್ಟ್ರೀಯ ನೆರವಿನ ಶೇಕಡ ೧೦ ರಷ್ಟನ್ನು ಮಾತ್ರ ಈ ಉದ್ದೇಶಗಳಿಗೆ ಬಳಸಲ್ಪಡುತ್ತಿದೆ. ವಿಶ್ವದ ಒಟ್ಟು ರಕ್ಷಣಾ ವೆಚ್ಚ ಶೇ. ೫೦, ಬಡ ರಾಷ್ಟ್ರಗಳ ಒಟ್ಟು ಆದಾಯಕ್ಕೂ ಹೆಚ್ಚು. ಇದರೊಂದಿಗೆ ಸಾಲದ ಹೊರೆ ಮತ್ತೊಂದು ತೊಡಕು. ಮಕ್ಕಳ ಕರುಣಾಜನಕ ಸ್ಥಿತಿಗೆ ಈ ಭಿನ್ನ ಅಂಕಿ-ಅಂಶಗಳೇ ಕಾರಣವೆಂದು ಸ್ಪಷ್ಟವಾಗಿ ತಿಳಿಯುತ್ತದೆ. ಹಾಗಾಗಿಯೇ ಯುನಿಸೆಫ್ ನ ೧೯೯೨ರ ಮಕ್ಕಳ ಸ್ಥಿತಿಗತಿ ವರದಿ ಮಕ್ಕಳಿಗೇ ಪ್ರಥಮ ಆದ್ಯತೆ ನೀಡಲು ಕರೆ ನೀಡಿದೆ.

ಪ್ರತಿವರ್ಷ ಬಸಿರು-ಬಾಣಂತನದ ತೊಂದರೆಗಳಿಂದ ೫ ಲಕ್ಷ ಮಹಿಳೆಯರು ಸಾವನ್ನಪ್ಪುತ್ತಾರೆ. ಪ್ರತಿ ವರ್ಷ ೧.೩೦ ಲಕ್ಷ ಮಕ್ಕಳು ಹುಟ್ಟಿದ ೫ ವರ್ಷಗಳೊಳಗೆ ಅಸು ನೀಗುತ್ತವೆ ಎಂದು ವರದಿ ತಿಳಿಸಿದೆ.

ಕುಟುಂಬ ಯೋಜನೆಗೆ ಪ್ರಾಶಸ್ತ್ಯ:- ಮಕ್ಕಳ ಮತ್ತು ಸ್ತ್ರೀಯರ ಮರಣವನ್ನು ಅಲ್ಪವೆಚ್ಚದ ಕುಟುಂಬ ಯೋಜನೆಯಿಂದ ಮಾತ್ರವೇ ಕಡಿಮೆ ಮಾಡಬಹುದು ಎಂದು ವರದಿ ಅಭಿಪ್ರಾಯ ಪಟ್ಟಿದೆ. ಕುಟುಂಬ ಯೋಜನೆ ಮತ್ತು ಸ್ವಾಸ್ಥ್ಯ ಶಿಕ್ಷಣ ಕಾರ್ಯಕ್ರಮಗಳಿಗೆ ಅದು ಹೆಚ್ಚಿನ ಪ್ರಾಶಸ್ತ್ಯ ಕೊಟ್ಟಿದೆ. ಕುಟುಂಬ ಯೋಜನೆಯಿಂದ ಶಿಶು ಮರಣದ ಪ್ರಮಾಣ ೩ ನೇ ಒಂದರಷ್ಟು ಪ್ರಮಾಣಕ್ಕೆ, ಅಪೌಷ್ಟಿಕತೆಯ ಪ್ರಮಾಣ ಮತ್ತು ಹೆರಿಗೆಯ ಸಮಯದಲ್ಲಿ ಸ್ತ್ರೀಯರ ಸಾವಿನ ಪ್ರಮಾಣವನ್ನು ಅರ್ಧದಷ್ಟು ತಗ್ಗಿಸಬಹುದು ಎಂದು ವರದಿ ಹೇಳಿದೆ.

ಭಾರತದಲ್ಲಿ ಪ್ರತಿ ವರ್ಷ ೩೮ ಲಕ್ಷ ಮಕ್ಕಳು ಅಸುವನ್ನು ನೀಗುತ್ತಿದ್ದಾರೆ. ಇವರೆಲ್ಲ ೫ ವರ್ಷದ ಒಳಗಿನವರಾಗಿದ್ದು ಸೌಲಭ್ಯಗಳ ಅಭಾವ, ಪೌಷ್ಟಿಕಾಂಶಗಳ ಕೊರತೆ ಮತ್ತಿತರ ಕಾರಣಗಳಿಂದಾಗಿ ಸಾವನ್ನಪ್ಪುತ್ತಿದ್ದಾರೆ. ಮಕ್ಕಳ ಜನನ ಪ್ರಮಾಣ ಪ್ರತಿವರ್ಷ ೨.೬೮ ಕೋಟಿ ಆಗಿದ್ದು ಸಾವಿನ ಪ್ರಮಾಣ ಶೇ.೧೪ ರಷ್ಟಿದೆ.

1968ರಲ್ಲಿ ಮೆಕ್ಸಿಕೋ ದೇಶದಲ್ಲಿ ನಡೆದ ಒಲಿಂಪಿಕ್ಸ್‌ನ ಕ್ರೀಡಾಜ್ಯೋತಿ ಬೆಳಗಿದ್ದು ಓರ್ವ ಮಹಿಳೆ. ಸ್ತ್ರೀಯರಿಂದ ಜ್ಯೋತಿ ಬೆಳಗಿಸುವುದು ಆರಂಭವಾದದ್ದೇ ಅಂದಿನಿಂದ.

ಮಹಿಳೆ

ಬಿಡುಗಡೆಯ ಹಾದಿಯಲ್ಲಿ

ಲೇ: ಎನ್. ಗಾಯಿತ್ರಿ.
ಪು: ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈ. ಲಿ,
ಬೆಂಗಳೂರು ೫೬೦೦೦೧
ಪ್ರ. ಮು: ೧೯೯೧

ಮದುವೆಯ ಚೌಕಟ್ಟಿನೊಳಗೆ ಕ್ರೌರ್ಯ, ವಂಚನೆಗೆ ಒಳಗಾಗುವ ಹೆಣ್ಣುಗಳು ದಿನದಿನಕ್ಕೂ ಕುಬ್ಜರಾಗಿ ದನಿಯಿಲ್ಲದವರಾಗುತ್ತಾರೆ, ಕೊಳಚೆ, ಗುಡಿಸಲುಗಳ ಹೆಂಗಸರು ತಮ್ಮ ಅನ್ನವನ್ನು ತಾವೇ ಸಂಪಾದಿಸಿಕೊಳ್ಳುತ್ತಿದ್ದರೂ ಗಂಡಂದಿರ ಹೊಡೆತದಿಂದ ಮಾತ್ರ ವಿಮೋಚನೆ ಪಡೆದಿರುವುದಿಲ್ಲ. ತಾಳಿ ಕಟ್ಟಿದ್ದರಿಂದ ಹೊಡೆಯುವ ಹಕ್ಕು ಪಡೆಯುವ ಗಂಡ ಕೇವಲ ಅವಿದ್ಯಾವಂತ, ಕೆಳವರ್ಗಕ್ಕೆ ಸೇರಿದವನು ಮಾತ್ರ ಎಂದು ತಿಳಿದರೆ ತಪ್ಪಾಗುತ್ತದೆ. ವಿಶ್ವವಿದ್ಯಾನಿಲಯದ ಪ್ರೊಫೆಸರ್‌ನಿಂದ ಹಿಡಿದು ಎಲ್ಲ ಹುದ್ದೆಯ, ಎಲ್ಲಾ ವೃತ್ತಿಯವರಲ್ಲೂ ಹೆಂಡತಿಯನ್ನು ಹೊಡೆಯುವವರು ಕಾಣಸಿಗುತ್ತಾರೆ. ಈ ದೈಹಿಕ ಹೊಡೆತ ಅಪರೂಪದ ಒಂದು ಕ್ಷಣದ ಕೋಪದ ಪ್ರಕೋಪವಲ್ಲ. ಹೆಂಡತಿಯ ಮೇಲೆ ಅಧಿಕಾರ ಚಲಾಯಿಸಬಲ್ಲೆನೆಂಬ ಭಾವನೆಗೆ ಒತ್ತುಕೊಡುವ ಗಂಡ–ಹೆಂಡಿರ ಅಸಮತೋಲನ ಸಂಬಂಧಗಳು ಇವು. ಜೀತದಾಳುಗಳ ಮೇಲೆ ಹಕ್ಕಿನಂತೆ ನಡೆಸುವ ದೌರ್ಜನ್ಯಕ್ಕಿಂತ ಇಲ್ಲಿ ವ್ಯತ್ಯಾಸವೇನೂ ಹೆಚ್ಚಿಲ್ಲ. ಇಂತಹ ದೌರ್ಜನ್ಯಗಳು ಬಹಿರಂಗವಾಗಿಯೂ ಕ್ರೌರ್ಯದ ರೂಪ ಹೊತ್ತಿರುವುದರಿಂದ ಪ್ರಜ್ಞಾವಂತರಾದ ಯಾರಾದರೂ ಇದನು ಖಂಡಿಸುತ್ತಾರೆ. ಆದರೆ ದೌರ್ಜನ್ಯದ ಮುಖವಾಡವಿಲ್ಲದೆ ತಣ್ಣನೆಯ, ಬಹಿರಂಗಗೊಳ್ಳದ ಕ್ರೌರ್ಯ ಸ್ತ್ರೀ–ಪುರುಷರ ನಡುವಿರಲು ಸಾಧ್ಯವಿದೆ. ದುಡಿಯುತ್ತಿರುವ, ನಾಲ್ಕಂಕಿಯ ಸಂಬಳ ತರುವ ಮಹಿಳೆಯರಿಂದ ಹಿಡಿದು ದುಡಿಯದ, ಅನಕ್ಷರಸ್ಥ ಮಹಿಳೆಯರವರೆಗೂ ಒಂದು ರೀತಿಯ ಪೂರ್ವನಿರ್ಧಾರಿತವಾದ ಗಂಡ–ಹೆಂಡತಿಯ ನಡುವೆ ಮೇಲು ಕೀಳಿನ ಸಂಬಂಧ ಸಿದ್ಧವಾಗಿರುತ್ತದೆ, ಆರ್ಥಿಕ ಸ್ವಾವಲಂಬನೆಯಿದ್ದರೂ ಮಾನಸಿಕ ದಾಸ್ಯ ಕಳೆದುಕೊಳ್ಳುವುದು ಅಷ್ಟೊಂದು ಸುಲಭವಲ್ಲ. ದೈಹಿಕ ಕ್ರೌರ್ಯವನ್ನು ಎದುರಿಸದಿದ್ದರೂ ಗಂಡನ ಹಾಗೂ ಕುಟುಂಬದ ಉಪೇಕ್ಷೆಗೆ, ನಿರಂತರ ನಿರ್ಲಕ್ಷ್ಯಕ್ಕೆ ಒಳಗಾಗುವ ಹೆಣ್ಣುಗಳು ವೈಯಕ್ತಿಕವಾಗಿ ತಮ್ಮತನವನ್ನು ಸ್ಥಾಪಿಸಿಕೊಳ್ಳಲು ಅಸಮರ್ಥರಾದಾಗ ಹತಾಶರಾಗುತ್ತಾರೆ. ದುಡಿಮೆಯ ಕ್ಷೇತ್ರದಲ್ಲಿರುವ ಹೆಣ್ಣುಗಳು ತಾವು ಯಾವ ಕಾರ್ಮಿಕ ಸಂಘಟನೆಗೆ ಸೇರಬೇಕೆಂಬುದಕ್ಕೆ ಗಂಡನ ಅನುಮತಿಗೆ ಕಾಯುವವರು ಇದ್ದಾರೆ. ತಾನು ಯಾವ ಪತ್ರಿಕೆಗೆ ಬರೆಯಬೇಕು ಎಂಬುದಕ್ಕೆ ಗಂಡನ ಅನುಮತಿ ಬೇಡುವ ಬರಹಗಾರ್ತಿಯರು ನಮ್ಮಲ್ಲಿ ಇದ್ದಾರೆ. ಇನ್ನೂ ಮುಂದುವರಿದಂತೆ ಪತ್ನಿ ಯಾರೊಡನೆ ಮಾತನಾಡಬೇಕು, ಯಾರೊಡನೆ ಸ್ನೇಹ ಮಾಡಬೇಕು, ಎಂಬುದನ್ನೂ ಪತಿಶ್ರೇಷ್ಠರೇ ನಿರ್ಧರಿಸುವ ಸಂದರ್ಭಗಳು ಉಂಟು. ಇಲ್ಲಿ ಕೇವಲ ಗಂಡಸು ಮಾತ್ರ ದೂಷಣೆಗೆ ಕಾರಣನಲ್ಲ. ತಮಗಾಗುತ್ತಿರುವ ಸ್ವಾತಂತ್ರ್ಯ ಹರಣದ ಪರಿವೆಯೇ ಇಲ್ಲದ ಹೆಂಗಸರ ದುಸ್ಥಿತಿ ನಿಜಕ್ಕೂ ವಿಷಾದನೀಯ. ತಮ್ಮ ಸುತ್ತಮುತ್ತಣ ಜಗತ್ತಿನಲ್ಲಿ ನಡೆಯುತ್ತಿರುವ ವಿದ್ಯಮಾನಗಳ ಪರಿವೆಯಿಲ್ಲದೆ, ತಮ್ಮಷ್ಟಕ್ಕೆ ತಮ್ಮದೇ ಪ್ರಪಂಚ ಸೃಷ್ಟಿಸಿಕೊಂಡು ನವೆಯುವ ನಮ್ಮ ಸ್ತ್ರೀ ಪರಂಪರೆಯು ಅಭದ್ರತೆಯಿಂದ ಕೂಡಿದ್ದಾಗಿದೆ. ಈ ಹೆಣ್ಣುಗಳ ಮಾನಸಿಕ ಅಭದ್ರತೆ ಎಷ್ಟೊಂದು ಕ್ರೂರವಾದದ್ದೆಂದರೆ ಭದ್ರತೆಯ ನಿರೀಕ್ಷೆಯಲ್ಲಿ ಹತಾಶರಾಗಿ ಸಮಸ್ಯಾತ್ಮಕವಾದ, ವಿವೇಚನಾರಹಿತವಾದ ಪರ್ಯಾಯ ಸಾಧ್ಯತೆಗಳಿಗೆ ಅವರು ಜೋತು ಬೀಳುತ್ತಾರೆ.

ಮಹಿಳಾ ಸ್ವಾತಂತ್ರ್ಯವೆನ್ನುವುದು ಅಮೂರ್ತ ಅಲ್ಲ; ಸನ್ನಿವೇಶಗಳಿಂದ ಅಬಾಧಿತವೂ ಅಲ್ಲ. ಹಾಗೆಯೇ ಸ್ವಾತಂತ್ರ್ಯದ ನಿಯಂತ್ರಣ ವೈಯಕ್ತಿಕವಾದದ್ದಾಗಲೀ, ಸನ್ನಿವೇಶದ ನಿಯಂತ್ರಣವಾಗಲೀ ಆಗಬಹುದು. ಆದ್ದರಿಂದ ಹೆಣ್ಣು ತನ್ನ ಸ್ವಾತಂತ್ರ್ಯವನ್ನು ಪಡೆಯಬೇಕಾದರೆ ಅದರ ಬಗೆಗಿನ ತಿಳುವಳಿಕೆ, ಅದನ್ನು ಪಡೆಯಲು ಪ್ರಯತ್ನ ನಡೆಸಬೇಕು. ಅನುಭವಜನ್ಯವಾದ ತಿಳುವಳಿಕೆಯನ್ನು ಹೆಣ್ಣು ದೂರ ಮಾಡಿದಷ್ಟು ಅವಳು ದಾಸ್ಯದ ಸಂಕೋಲೆಯನ್ನು ತನಗೇ ಸುತ್ತಿಕೊಳ್ಳುತ್ತಿರುತ್ತಾಳೆ. ಈ ಸಂದರ್ಭದಲ್ಲಿ ಜವಾಹರಲಾಲ್‌ನೆಹರೂರವರು ಒಮ್ಮೆ ಹೇಳಿದ ಮಾತನ್ನು ಉಲ್ಲೇಖಿಸಬಹುದು. "ಮಹಿಳೆಗೆ ಸ್ವಾತಂತ್ರ್ಯ ದೊರೆಯಬೇಕಾದರೆ ವಿವಾಹ ಒಂದು ವೃತ್ತಿ ಎಂಬ ಭಾವನೆ ಮೊದಲು ಮರೆಯಬೇಕು, ಸ್ವಾತಂತ್ರ್ಯವು ಆರ್ಥಿಕ ಸ್ಥಿತಿಗತಿಗಳ ಮೇಲೆ ಅವಲಂಬಿಸಿದೆ, ಮಹಿಳೆ ಆರ್ಥಿಕವಾಗಿ ಸ್ವತಂತ್ರಳಾಗದೆ ಹಾಗೂ ಸ್ವಯಂಗಳಿಕೆಯಲ್ಲಿ ತೊಡಗದಿದ್ದರೆ ಅವಳು ಗಂಡ ಅಥವಾ ಇನ್ನಾರ ಮೇಲೋ ಅವಲಂಬಿತಳಾಗಿರಬೇಕಾಗುತ್ತದೆ. ಪರಾವಲಂಬಿಗಳೆಂದಿಗೂ ಸ್ವತಂತ್ರರಲ್ಲ. ಸ್ತ್ರೀ-ಪುರುಷರ ಸಂಬಂಧ ಪರಸ್ಪರ ಅವಲಂಬನೆ ಇಲ್ಲದಂತಹ ಸ್ವತಂತ್ರ ಹಾಗೂ ಸಂಗಾತಿಯಾಗಿರುವಂಥದ್ದು."

ಸ್ವಾತಂತ್ರ್ಯದ ಆಕಾಂಕ್ಷೆಯಿದ್ದರೂ, ಸ್ವಾತಂತ್ರ್ಯವನ್ನು ಅನುಭವಿಸಲು ಸೂಕ್ತ ಸಾಮಾಜಿಕ ರಚನೆ ಬೇಡವೇ? ಬೇರೆ ದೇಶದಲ್ಲಿ ಸ್ವಾತಂತ್ರ್ಯ ಅನುಭವಿಸುತ್ತಿರುವ ಮಹಿಳೆಯರ ಜೀವನ ವಿಧಾನವನ್ನು ಅನುಕರಿಸಿದ ಮಾತ್ರಕ್ಕೆ ನಮಗೆ ಸ್ವಾತಂತ್ರ್ಯ ದಕ್ಕೀತೆ? ಅಂತಹ ಬದಲಾವಣೆಯನ್ನು ನಮ್ಮಲ್ಲಿ ಬಯಸಿದರೂ, ಕೇವಲ ಇಚ್ಛಾ ಮಾತ್ರದಿಂದ ಬದಲಾವಣೆಯ ಸ್ಥಿತಿ ಉಂಟಾಗುವುದಿಲ್ಲ. ಆಂತರಿಕ ರಚನೆಯಲ್ಲೇ ಮೂಲಭೂತ ಬದಲಾವಣೆಯು ಅಗತ್ಯವಿದೆ. ಈ ಬದಲಾವಣೆಯ ಪ್ರತಿ ಹಂತದಲ್ಲೂ ಆಗುವ ಆಂತರಿಕ ಘರ್ಷಣೆಗಳಿಂದ ತಿಳುವಳಿಕೆ ಮೂಡುತ್ತದೆ. ಈ ತಿಳುವಳಿಕೆಯ ನೆರವಿನಿಂದ ಸ್ವಾತಂತ್ರ್ಯದತ್ತ ಹೆಜ್ಜೆಯಿಡಬೇಕು.

ಹೆಣ್ಣಿನ ಸಮಸ್ಯೆಗಳ ಉಗಮ ಮತ್ತು ಸ್ವರೂಪವನ್ನು ಅಧ್ಯಯನ ಮಾಡುವುದರಿಂದ ಆ ಸಮಸ್ಯೆಗಳು ಅಪೇಕ್ಷಿಸುವ ಪರಿಹಾರಗಳತ್ತ ದೃಷ್ಟಿ ಹರಿಸಬಹುದು. ಹೆಣ್ಣಿನ ಶತ್ರು ಪುರುಷನಲ್ಲ. ಗಂಡು ಹೆಣ್ಣಿನ ಅಸಮಾನತೆ ಸಂಪೂರ್ಣವಾಗಿ ಜೀವಶಾಸ್ತ್ರೀಯವಾದ ನಿಜಾಂಶವೆಂದು ಕೈಕಟ್ಟಿ ಕೂರಬೇಕಿಲ್ಲ. ಸ್ತ್ರೀ ವಿಮೋಚನೆಗೆ ಸ್ತ್ರೀ ಪುರುಷರ ಇಂದಿನ ಪಾತ್ರಗಳು ಅದಲು ಬದಲು ಆಗಬೇಕಾಗಿಲ್ಲ. ಹಾಗಾದರೆ ಆಗಬೇಕಾಗಿರುವುದು ಮತ್ತೇನು?

ಸಮಾಜದ ಅರ್ಧಭಾಗವಾದ ಹೆಣ್ಣಿನ ಇಂದಿನ ದುಃಸ್ಥಿತಿಗೆ ಒಂದು ಚರಿತ್ರೆಯಿದೆ. ಚರಿತ್ರೆಯಲ್ಲಿ ಅವಳ ಸ್ಥಾನಮಾನಗಳಿಗೆ ಕಾರಣವಾದ ಅಂದಂದಿನ ಸಾಮಾಜಿಕ ಶಕ್ತಿಗಳು ಮತ್ತು ಅವುಗಳ ಬದಲಾವಣೆಯಿಂದುಂಟಾದ ಪರಿಣಾಮವನ್ನು ಅಧ್ಯಯನ ಮಾಡಬೇಕಾಗಿದೆ. ಇದರಿಂದ ಮಹಿಳಾ ಸಮಸ್ಯೆಗೆ ಕಾರಣವಾದ ಶಕ್ತಿಗಳನ್ನು ಅನ್ವೇಷಿಸಿ ಅದರ ವಿರುದ್ಧದ ಚಳುವಳಿಗೆ ಅಗತ್ಯವಾದ ಸಲಕರಣೆಗಳನ್ನು ಕುರಿತು ಚರ್ಚಿಸಬೇಕಾಗಿದೆ.

ಸಮಾಜದ ಯಾವುದೇ ಸಮಸ್ಯೆಯನ್ನು ಸಮಾಜದ ಚೌಕಟ್ಟು ಮತ್ತು ಉತ್ಪಾದನಾ ವಿಧಾನದಿಂದ ದೂರವಿಟ್ಟು, ಸ್ವತಂತ್ರವಾಗಿ ಹೇಗೆ ಪರಿಗಣಿಸಬಾರದೋ ಹಾಗೆಯೇ ಲೈಂಗಿಕ ಆಧಾರದ ಮೇಲೆ ಶ್ರಮ ವಿಭಜನೆಗೊಂಡ ಸ್ತ್ರೀ ಪುರುಷರ ಸಂಬಂಧವನ್ನು ಚಾರಿತ್ರಿಕವಾಗಿ ಸಮಾಜದಲ್ಲಿ ಉಂಟಾಗಿರುವ ಸಾಮಾಜಿಕ ಚೌಕಟ್ಟು ಮತ್ತು ಉತ್ಪಾದನಾ ವಿಧಾನದಿಂದ ಬೇರ್ಪಡಿಸಿ ನೋಡಲಾಗುವುದಿಲ್ಲ.

ಇಂದು ಸ್ತ್ರೀ ಪುರುಷರ ನಡುವಿನ ಅಸಮಾನತೆಯ ವಿರುದ್ಧದ ಹೋರಾಟ ಹಲವು ರೀತಿಯಲ್ಲಿ ನಡೆದಿದೆ. ವರದಕ್ಷಿಣೆ, ಅತ್ಯಾಚಾರ, ಅಶ್ಲೀಲ ಚಿತ್ರಗಳು ಮತ್ತು ಜಾಹೀರಾತಿನ ವಿರುದ್ಧ ಮಹಿಳಾ ಸಂಘಟನೆಯನ್ನು ಸೂಚಿಸಿ ಹೆಣ್ಣಿನ ಮೇಲೆ ನಡೆದಿರುವ ಮಾನಸಿಕ ಹಾಗೂ ದೈಹಿಕ ಶೋಷಣೆಗಳ ವಿರುದ್ಧ ದನಿಯೆತ್ತಿವೆ,

ಸ್ತ್ರೀ-ವಾದ ಮತ್ತು ಚಿತ್ರರಂಗ

ಚಲನಚಿತ್ರದ ಆರಂಭ ಕಾಲದಲ್ಲಿ ಸ್ತ್ರೀಯರು ಚಿತ್ರರಂಗಕ್ಕೆ ಕಾಲಿಡದಿದ್ದರೂ ಈಗ ಚಿತ್ರರಂಗದ ಅವಿಭಾಜ್ಯ ಅಂಗವಾಗಿಬಿಟ್ಟಿದ್ದಾರೆ. ಆದರೆ "ಮಹಿಳಾ ಸಿನಿಮಾ" ಎಂಬ ಮಾತನ್ನು ಗಟ್ಟಿಯಾಗಿ ಹೇಳುವಂಥ ದಿನಗಳು ಇನ್ನೂ ಇಲ್ಲ. ಸ್ತ್ರೀ ವಾದದ ಪರಿಣಾಮವಾಗಿ ಪಾಶ್ಚಾತ್ಯ ದೇಶಗಳಲ್ಲಿ ಚಿತ್ರೋದ್ಯಮ ಹಲವಾರು ಮಹಿಳಾ ನಿರ್ಮಾಪಕರನ್ನು ಕಂಡರೂ ಭಾರತದ ಮಟ್ಟಿಗೆ ಅಂಥವರ ಸಂಖ್ಯೆ ಹೇಳಿಕೊಳ್ಳುವಷ್ಟಿಲ್ಲ.

ವಿಚಿತ್ರವೆಂದರೆ, ಸ್ತ್ರೀಯರಿಗೇ ಸಂಬಂಧಿಸಿದಂಥ ವರದಕ್ಷಿಣೆ, ಬಾಲ್ಯವಿವಾಹ, ವಿಧವಾ ವಿವಾಹ, ಮನೆಗಳಲ್ಲಿ ಅವರು ಎದುರಿಸಬೇಕಾದ ಸಮಸ್ಯೆ, ಹಿಂಸೆ ಇತ್ಯಾದಿಗಳನ್ನು ಕೇಂದ್ರವಾಗಿಟ್ಟುಕೊಂಡು ಹಲವಾರು ಚಲನಚಿತ್ರಗಳು ಬಂದಿವೆ. ಆದರೆ ಇವುಗಳ ನಿರ್ಮಾಪಕರು ಪುರುಷರೇ ಹೊರತು ಮಹಿಳೆಯರಲ್ಲ. ಇದಕ್ಕೆ ಎರಡು ಪ್ರಮುಖ ಕಾರಣಗಳನ್ನು ನೀಡಬಹುದು. ಮೊದಲನೆಯದಾಗಿ ಚಿತ್ರೋದ್ಯಮ ಪುರುಷ ಪ್ರಧಾನ ವ್ಯವಸ್ಥೆಯಾಗಿರುವುದು, ಮತ್ತೊಂದು ಸ್ತ್ರೀ ವಾದಕ್ಕೆ ಸಂಬಂಧಿಸಿದಂಥ ವೇಲಿನ ವಿಷಯಗಳನ್ನು ತೆಗೆದುಕೊಳ್ಳುವುದಕ್ಕೆ ಸ್ತ್ರೀಯರು ಹಿಂಜರಿಯುವುದು. ಹಿಗೇಕೆಂದರೆ ಪಟ್ಟಣದಲ್ಲಿನ ಮಧ್ಯಮವರ್ಗದ ಸ್ತ್ರೀಯರು ಇಂಥ ಸಂದರ್ಭಗಳಲ್ಲಿ ಪಾರಂಪರಿಕ ಭಾವನಾತ್ಮಕತೆಯೊಂದಿಗೆ ಸಂಘರ್ಷ ನಡೆಸುವಂಥ ಮನಃಸ್ಥಿತಿ ಹೊಂದಿರುತ್ತಾರೆ ಎನ್ನಬಹುದು.

ತಡವಾಗಿಯಾದರೂ ಕೆಲ ಯುವ ನಿರ್ಮಾಪಕಿಯರ ಗುಂಪು ಚಿತ್ರರಂಗದಲ್ಲಿ ಕಾಲಿಟ್ಟಿದೆ. ಸ್ತ್ರೀಯರ ಸಮಸ್ಯೆಗಳನ್ನು ವಿಕೃತ ಸಾಮಾಜಿಕ ಸನ್ನಿವೇಶಗಳಲ್ಲಿ– ಅಂಥ ಸಮಸ್ಯೆಗಳನ್ನು ವಿಶ್ಲೇಷಿಸುವಾಗ ಅವರು ಎದುರಿಸಿದಂಥ ಎಡರು ತೊಡರುಗಳನ್ನೂ, ಪೂರ್ವಗ್ರಹ ಅಭಿಪ್ರಾಯಗಳೊಂದಿಗಿನ ಹೋರಾಟಗಳನ್ನೂ ದೃಶ್ಯ ಮಾಧ್ಯಮದಲ್ಲಿ ಪರಿಣಾಮಕಾರಿಯಾಗುವಂತೆ ಚಿತ್ರಿಸಲು ಯತ್ನಿಸಿದ್ದಾರೆ. ಆದರೆ ಇವರ ಪ್ರಯತ್ನವೆಲ್ಲ ಖಾಸಗಿ ಶೋಗೆ ಎನ್ನುವಂತಾಗಿ ಉದ್ದೇಶಿತ ಗುರಿ ಮುಟ್ಟಲು ಅಸಾಧ್ಯವಾಗಿಬಿಟ್ಟದೆ. ಹಂಚಿಕೆದಾರರು ಸಿಗದಿರುವುದು ಒಂದು ಕಾರಣವಾದರೆ, ರಾಜ್ಯಗಳ ದೂರದರ್ಶನಗಳ ಉದಾಸೀನವೂ ಇಂಥ ಪರಿಸ್ಥಿತಿಗೆ ದಾರಿಮಾಡಿಕೊಟ್ಟಿದೆ.

ಬಲಾತ್ಕಾರ ಕುರಿತ ಚಿತ್ರವನ್ನು ಅಸೀಮ ಧೈರ್ಯದಿಂದ ಮಾಡಿದ ದೆಹಲೀ ಮೂಲದ ಸಾಗರಿ ಚಬ್ರಾ "ಒಳ್ಳೆಯ ಚಿತ್ರ ತೆಗೆಯಬೇಕೆಂಬುದರ ಗುರಿ ಶಿಕ್ಷಣ ಮಾತ್ರವಲ್ಲ, ಅದಕ್ಕೂ ಹೆಚ್ಚಿನದಾಗಿರಬೇಕು" ಎನ್ನುತ್ತಾರೆ. ಅವರು ತೆಗೆದ "ನೌ ಐ ವಿಲ್ ಸ್ಪೀಕ್" ಚಿತ್ರದಲ್ಲಿ ಅತ್ಯಾಚಾರಕ್ಕೊಳಗಾದ ಅಭಾಗಿನಿಯರು ಪ್ರಥಮ ಬಾರಿಗೆ ತಮ್ಮ ನೋವಿನ ಅನುಭವಗಳನ್ನು ಕುರಿತು ಮಾತನಾಡುತ್ತಾರೆ. 'ಮಹಿಳೆಯರನ್ನು ಜಾಗೃತಗೊಳಿಸುವ ಇಂಥ ಚಿತ್ರಗಳು ಶಿಕ್ಷಣಕ್ಕಿಂತ ಹೆಚ್ಚು ಶಕ್ತಿಯುತವಾಗಿರಬೇಕು ಎಂದು ಅವರು ಅಭಿಪ್ರಾಯ ಪಡುತ್ತಾರೆ.

ಸಾಗರಿ ತಮ್ಮ ಚಿತ್ರದಲ್ಲಿ, ಅತ್ಯಾಚಾರವು ಯಾವಾಗಲೂ ಅಧಿಕಾರ ಬಲದಿಂದ ಪೂರ್ವ ಯೋಜಿತವಾಗಿ ನಡೆಯುತ್ತದಲ್ಲದೆ ವಿಷಯ ಲಂಪಟತನ ಅಥವಾ ಕಾಮುಕತನದಿಂದ ಅಲ್ಲ ಎಂಬಂತೆ ಚಿತ್ರಿಸಿದ್ದಾರೆ. ಬಿಹಾರ, ಗುಜರಾತ್, ರಾಜಸ್ಥಾನ್ ಹಾಗೂ ದೆಹಲಿಯಲ್ಲಿ ಅತ್ಯಾಚಾರಕ್ಕೊಳಗಾದ ಸ್ತ್ರೀಯರ ಸಂದರ್ಶನ ಆಧರಿಸಿದ ಈ ಚಿತ್ರ ಮಾನಸಿಕ ಹಾಗೂ ಸಾಮಾಜಿಕ ನೆಲೆಗಟ್ಟಿನಲ್ಲಿ "ಅತ್ಯಾಚಾರ" ವನ್ನು ವಿಶ್ಲೇಷಿಸಲು ಪ್ರಯತ್ನಿಸಿದೆ. ಚಿತ್ರೀಕರಣ ಸಮಯದಲ್ಲಿಯೂ ಸಾರ್ವಜನಿಕರ ಮುಂದೆ ಬರಲು ಸಂಕೋಚಪಟ್ಟವರ ಅಸಹಕಾರ ಒಂದೆಡೆಯಾದರೆ, ಇದಕ್ಕಿಂತಲೂ ಹೆಚ್ಚಾಗಿ ಅಪರಾಧಿಗಳಿಂದ, ಇತರೆ ಜನರಿಂದ ಚಿತ್ರೀಕರಣ ಕಾಲದ ಎದುರಿಸಿದ ಕಷ್ಟಗಳಿಗೆ, ವಿರೋಧಗಳಿಗೆ ಲೆಕ್ಕವಿಲ್ಲ. ಪ್ರಾಣಹಾನಿಯ ಬೆದರಿಕೆಗೆ ಮಣಿಯದ

ಈ ತಂಡ ತನ್ನ ಕಾರ್ಯ ಪೂರೈಸಿತ್ತು, ಇಷ್ಟೆಲ್ಲ ಕಷ್ಟಪಟ್ಟು ತೆಗೆದ ಚಿತ್ರ ಈಗ ಅನುಕೂಲವಿರುವವರು ತಮ್ಮ ಮನೆಗಳಲ್ಲಿ ನೋಡುವಂತಾಗಿದೆಯಲ್ಲದೆ ಯಾವ ವರ್ಗಕ್ಕೆ, ಯಾರಿಗೆ ಮುಟ್ಟಬೇಕಿತ್ತೋ ಅವರಿಂದ ದೂರವಾಗೇ ಇದೆ. ಕಾರಣ ಖಾಸಗಿಯಾಗಿ ಚಿತ್ರ ವೀಕ್ಷಿಸುವ ಅನುಕೂಲ ಗ್ರಾಮಗಳ ಮಹಿಳೆಯರಿಗೆ ಇಲ್ಲವೇ ಇಲ್ಲವಾದುದರಿಂದ. ದೂರದರ್ಶನಗಳಲ್ಲಿ ಪ್ರದರ್ಶನಗೊಳ್ಳುವುದೂ ಕಷ್ಟವೇ. ಒಂದು ವೇಳೆ ಪ್ರದರ್ಶಿತವಾದರೂ ಹಳ್ಳಿಗಳಲ್ಲಿ ದೂರದರ್ಶನವನ್ನು ನೋಡುವ ಸ್ತ್ರೀಯರು ಬಹಳ ಸಂಖ್ಯೆಯಲ್ಲಿ ಇಲ್ಲವಾದುದರಿಂದ ಅದೂ ನಿರೀಕ್ಷಿತ ಫಲ ನೀಡದು.

ದೂರದರ್ಶನಗಳಲ್ಲಿ ಪ್ರದರ್ಶಿತವಾಗಬೇಕಾದರೂ ಕೆಲವು ಅಡಚಣೆಗಳಿವೆ. "ದೂರದರ್ಶನಗಳಲ್ಲಿ ಚಿತ್ರ ಪ್ರದರ್ಶನವೆಂದರೆ ಕತ್ತರಿ ಪ್ರಯೋಗಕ್ಕೊಳಗಾಗಿ ಪ್ರದರ್ಶಿಸಲ್ಪಡುವುದು, ಅದು ನಮಗೆ ಒಗ್ಗದ ಮಾತು" ಎನ್ನುತ್ತಾರೆ ಮೀಡಿಯಾ ಸ್ಟಾರ್ಮ್ ತಂಡದವರು. ಜಾಮಿಯಾ ಮಿಲಿಯಾ ಮಾಸ್ ಕಮ್ಯುನಿಕೇಷನ್ ರಿಸರ್ಚ್ ಸೆಂಟರ್‌ನ ವಿದ್ಯಾರ್ಥಿನಿಯರಾದ ೬ ಮಂದಿಯ ಈ ತಂಡ ಈಗಾಗಲೇ ಸಾಕಷ್ಟು ಚಿತ್ರಗಳನ್ನು ತೆಗೆದಿದೆ. "ಫ್ರಂ ದಿ ಬರ್ನಿಂಗ್ ಎಂಬರ್ಸ್" ಇದೇ ತಂಡ ಚಿತ್ರೀಕರಿಸಿದ ಚಿತ್ರವಾಗಿದ್ದು ಜನಜನಿತವಾಗಿದೆ. ೧೯೮೮ರಲ್ಲಿ ರಾಜಸ್ಥಾನದ ದಿಯೋರಾಲದಲ್ಲಿ ನಡೆದ ಸತಿಯನ್ನು ಆಧಾರವಾಗಿಟ್ಟುಕೊಂಡು ಬಂದ ಈ ಚಿತ್ರ ಹೆಚ್ಚು ಕತ್ತರಿ ಪ್ರಯೋಗಕ್ಕೊಳಗಾಗದೆ ದೂರದರ್ಶನದಲ್ಲಿ ಪ್ರದರ್ಶಿಸಲ್ಪಟ್ಟಿತ್ತು. ಇದೇ ತಂಡದ ಇನ್ನಿತರ ಚಿತ್ರಗಳು "ಇನ್ ಸೆಕ್ಯುಲರ್ ಇಂಡಿಯಾ" ವಿವಾದಾಸ್ಪದವಾದಂಥ ಮುಸ್ಲಿಂ ಸ್ತ್ರೀಯರ ಆಕ್ಟ್ ಆನ್ (ವಿಚ್ಛೇದನದ ವಿರುದ್ಧದ ಹಕ್ಕು ಸಂರಕ್ಷಣೆ) ಕುರಿತದ್ದು ಮತ್ತು "ಕಿಸ್‌ಕಾ ಧರ್ಮ್ ಕಿಸ್‌ಕಾ ದೇಶ್" ರಾಮ ಜನ್ಮಭೂಮಿ ಬಾಬ್ರಿ ಮಸೀದಿಯ ವಸ್ತುವನ್ನೊಳಗೊಂಡ ಚಿತ್ರಗಳು ಸೆನ್ಸಾರ್ ಬೋರ್ಡಿನಿಂದ ಇನ್ನೂ ಮುಕ್ತವಾಗಿಲ್ಲ.

ಚಿತ್ರ ಇಂಗ್ಲೀಷಿನಲ್ಲಿದ್ದರೆ ಶಾಲಾ ಕಾಲೇಜುಗಳಲ್ಲಿ ಪ್ರದರ್ಶಿತವಾಗುತ್ತವೆ. ಕೇವಲ ಒಂದು ಭಾಗದ ಜನರಿಗಷ್ಟೇ ಮುಟ್ಟುತ್ತದೆ. ಹಿಂದಿಯಲ್ಲಿದ್ದರೆ, ದೂರದರ್ಶನದಲ್ಲಿ ಪ್ರದರ್ಶನಗೊಂಡರೆ ವೀಕ್ಷಕರ ಸಂಖ್ಯೆ ಅಪಾರವಾಗಿರುವುದಾದರೂ ಹಳ್ಳಿಗಳ ಬಡವರನ್ನು, ಅವಿದ್ಯಾವಂತರನ್ನು ತಲುಪುವುದು ದುಸ್ತರ.

ಇವುಗಳನ್ನು ನಿವಾರಿಸುವ ಉದ್ದೇಶದಿಂದಲೇ ಈಗೀಗ ಚಿತ್ರ ನಿರ್ಮಾಪಕರು ಸ್ವಯಂ ಸೇವಾ-ಸಂಘಗಳು, ಸ್ತ್ರೀ-ಸಂಘಟನೆಗಳೊಂದಿಗೆ ಕೂಡಿ ಸಾರ್ವಜನಿಕ ವೀಕ್ಷಣೆಗೆ ಅನುವು ಮಾಡುತ್ತಿದ್ದಾರೆ. ಅಸಾಧ್ಯವಾದೆಡೆಗಳಲ್ಲೂ, ಹಳ್ಳಿಗಳ ಸಾರ್ವಜನಿಕ ಭವನಗಳಲ್ಲೂ ಇಂಥ ಚಿತ್ರಗಳನ್ನು ಪ್ರದರ್ಶಿಸಲು ಶಕ್ತಿಮೀರಿ ಪ್ರಯತ್ನಿಸಲಾಗುತ್ತಿದೆ. ಹಾಗಿದ್ದರೂ ಜನರ ಹಾಗೂ ನಿರ್ಮಾಪಕರ ನಡುವಿನ ಅಂತರ ಅಳಿಸಿಲ್ಲ, ಅದಕ್ಕಾಗಿಯೇ ಸಾಗರಿ ಬದಲಿ ಸಂವಹನ ಮಾಧ್ಯಮ ವ್ಯವಸ್ಥೆಯ ಬಗ್ಗೆ ಒಲವು ತೋರುತ್ತಾರೆ, ಆ ಮೂಲಕ ದೇಶದ ವಿವಿಧೆಡೆಗಳಿಗೆ ಚಿತ್ರಗಳನ್ನು ತಲುಪಿಸಬಹುದು ಎಂದು ಸೂಚಿಸುತ್ತಾರೆ. ಇದರೊಂದಿಗೇ ಒಂದು ಚಾನೆಲ್ ಅನ್ನು ಖಾಸಗಿ ಚಿತ್ರ ನಿರ್ಮಾಪಕರಿಗೆಂದು ಬಿಟ್ಟುಕೊಡಬೇಕು ಎಂದು ಬಯಸುತ್ತಾರೆ. ಈ ವಾದಕ್ಕೆ ಇಂಬುಕೊಡುವ ಮೀಡಿಯಾ ಸ್ಟಾರ್ಮ್‌ನ ಶೋಹಿನಿ ಘೋಷ್ ಇದೇ ಉದ್ದೇಶಕ್ಕಾಗಿ ಸ್ವಯಂ ಸೇವಾ ಸಂಸ್ಥೆಗಳೊಂದಿಗೆ ಮಾತುಕತೆ ನಡೆಸಲಾಗುತ್ತಿದೆ ಎಂದೂ ಹೇಳುತ್ತಾರೆ. ಕೇವಲ ಕೆಲವು ಚಿತ್ರಗಳಿಂದ ಸಮಾಜವನ್ನು ಬದಲಾಯಿಸಲಾಗುವುದಿಲ್ಲ, ಸ್ತ್ರೀ-ಸ್ವಾತಂತ್ರ್ಯ, ಸ್ವಂತ ವ್ಯಕ್ತಿತ್ವಗಳ ಕಲ್ಪನೆಗಳನ್ನು ರಾತ್ರೋ ರಾತ್ರಿ ಹುಟ್ಟುಹಾಕುವುದು ಅಶಕ್ಯವೆನ್ನುವ ಸರೀನಾ ಗಾಡಿಹೋಕೆ ಈ ಬಗ್ಗೆ ರಾಷ್ಟ್ರವ್ಯಾಪಿ ಸಂಘಟನೆ ರೂಪುಗೊಂಡರೆ ಉದ್ದೇಶಿತ ಗುರಿ ಮುಟ್ಟಲು ಸಾಧ್ಯ ಎಂಬ ಆಶಯ ವ್ಯಕ್ತಪಡಿಸುತ್ತಾರೆ. ಇವರೂ ಮೀಡಿಯಾ ಸ್ಟಾರ್ಮ್ ತಂಡದವರೇ. ಆಕೆಯ ಸಹೋದ್ಯೋಗಿ ಸರೀನಾ ಕಿದ್ವಾಯಿಯವರು ಖಾಸಗಿ ಚಿತ್ರ ತಯಾರಕರು ಎದುರಿಸಬೇಕಾಗಿ ಬರುವ ಆರ್ಥಿಕ ಸಂಕಷ್ಟಗಳ ಬಗ್ಗೆ ಬೆರಳುಮಾಡುತ್ತಾರೆ. ಜೀವನಕ್ಕಾಗಿ ದುಡಿಯಲೇ ಬೇಕಾಗಿರುವ ಖಾಸಗಿ ತಯಾರಕರು ಕ್ರಮವಾಗಿ ಚಿತ್ರ ತೆಗೆಯಲು ಆರ್ಥಿಕ ಅಡಚಣೆ ಅಡ್ಡಿಯಾಗಿದೆ. ಚಿತ್ರ ನಿರ್ಮಾಣ ಬಹು ದೊಡ್ಡ ಮೊತ್ತವನ್ನು ಬೇಡುವುದರಿಂದ ಅಷ್ಟನ್ನೂ ಕೈಯಾರೆ ಹಾಕುವುದು ಶಕ್ಯವಿಲ್ಲ ಎಂದು ನುಡಿಯುತ್ತಾರೆ. ಆದ್ದರಿಂದಲೇ ಇಂಥ ನಿರ್ಮಾಪ

ಕರೂ ಡೊನೇಷನ್‌ಗಳಿಗೆ ಕೈ ಚಾಚಬೇಕಾಗಿದೆ.

ಯಾವುದೇ ಒಳ್ಳೇ ಚಿತ್ರ ತಯಾರಿಗೆ ಸಂಬಂಧಪಟ್ಟ ವಿಷಯದ ಕುರಿತು ತೀವ್ರತರ ಸಂವೇದನೆ ಇರಬೇಕು. ಇಲ್ಲದಿದ್ದರೆ ಒಳ್ಳೆಯ ಚಿತ್ರ ನಿರ್ಮಾಣ ಅಶಕ್ಯ ಎನ್ನುತ್ತಾರೆ ಸಾಗರಿ. ಮಹಿಳೆಯರಿಗೆ ಸಂಬಂಧಿಸಿದ ವಿಷಯವಾಗಿರಲಿ, ಸಾಮಾಜಿಕ ಅನಿಷ್ಟಗಳೇ ಆಗಿರಲಿ. ಅವುಗಳಲ್ಲಿ ಮಹಿಳೆಯರ ಪಾತ್ರವಿದ್ದರೂ ಸಹ ಸೃಜನತೆಗೆ ಧಕ್ಕೆ ಬಾರದಂತೆ ಸ್ತ್ರೀಯರಿಗೇ ಒತ್ತು ನೀಡಿ ಚಿತ್ರ ತೆಗೆವ ಸಾಹಸ ಮೊಡಿಯಾ ಸ್ವಾರ್ಮ್‌ನದ್ದು. ಜೀವನಕ್ಕೆ ಸಂಬಂಧಿಸಿದ ತಮ್ಮ ಅರಿವಿಗೆ ಬಂದ ಘಟನೆ, ಸಂದರ್ಭ, ನೋಟಗಳನ್ನು ಎಲ್ಲ ರೀತಿಯ ದೃಷ್ಟಿಕೋನಗಳಲ್ಲೂ ವಿವೇಚಿಸಿ, ಅರ್ಥೈಸುವುದು ಸಾರಿಗೆಯವರ ರೀತಿ.

ಮೇಲೆ ಹೇಳಿದಂಥ ನಿರ್ಮಾಪಕರುಗಳು ದೂರದರ್ಶನಗಳ ನೆರವು ಬೇಡುವುದಿಲ್ಲ ತಮ್ಮ ಚಿತ್ರ ನಿರ್ಮಾಣ ಕೆಲಸಕ್ಕೆ. ಏಕೆಂದರೆ ದೂರದರ್ಶನಗಳಂಥ ಸಂಸ್ಥೆಗಳು ಕಡಿಮೆ ಬಜೆಟ್‌ನ ಸಿನಿಮಾಗಳನ್ನು ತೆಗೆಯುವ ಡೈರೆಕ್ಟರ್‌ಗಳು ವ್ಯವಸ್ಥೆಯೊಂದಿಗೆ ರಾಜಿ ಮಾಡಿಕೊಳ್ಳುವಂಥ ಪರಿಸರಕ್ಕೆ ಕಾರಣವಾಗುತ್ತವೆ. ಒತ್ತಡ ಹೇರುತ್ತವೆ. ಆ ಪರಿ ತಮಗೆ ಒಗ್ಗದು ಎಂಬ ನಿಲುವು ಈ ಎಲ್ಲ ನಿರ್ಮಾಪಕಿಯರದು. ಈ ಎಲ್ಲ ಸಮಸ್ಯೆಗಳ ನಿವಾರಣೆ, ದೂರದರ್ಶನಗಳ ಸ್ವಾಯತ್ತತೆಯಿಂದ ಮಾತ್ರವೇ ಸಾಧ್ಯ ಎಂಬುದು ಉತ್ಪ್ರೇಕ್ಷೆಯ ಮಾತಲ್ಲ.

ಜಿ. ಎಸ್ ಶ್ರೀಮತಿ.

(ದಿ ಹಿಂದೂ ಕೃಪೆ)

"ಮುದ್ದು"

ನನ್ನ ಬೆಳವಣಿಗೆ
ಸಾಲದಂತೆ;
ನನ್ನ, ನಲ್ಲ ದಿನವೂ ತರುತ್ತಾನೆ
ಮದ್ದಿನ ಪೊಟ್ಟಣ
ಕೈ ತುಂಬಿ ಕೊಡುತ್ತಾನೆ
ಟಾನಿಕ್- ಬಾಟಲ್ ಹೂರಣ
ಕುಡಿದು- ತಿಂದು- ನುಂಗಿ; ಉಬ್ಬಳಿಸಿ
ಬಾಯಿರುಚಿ ಕೆಟ್ಟು ಹೋಗಿದೆ
ಈಗನಕ
ಬಿಡಿಸಿ ಹೇಳಿದರೂ ಅರ್ಥವಾಗುತ್ತಿಲ್ಲ
ಅವನಿಗೆ, ಗುರು-ಲಘುಗಳ
ಚಕಾಮಕ

ಬಾಯ್ತುಂಬಾ ಅಜ್ಜಿಗಳ ಸರಮಾಲಿ
ಹೊತ್ತೇ ಬರುತ್ತಾನೆ
ಬಿಗಿಯುತ್ತಾನೆ, ಉಸಿರ ಕೊಟ್ಟು
ಕೊಟ್ಟುಸಿರ ಹಿಂದೆಯೇ ಪಡೆಯುತ್ತಾನೆ
ನನ್ನ ತಾವು, ಎಲ್ಲೆಂದರೆ
ಅಲ್ಲೆಂದು ತನ್ನೆದೆಯ ಹರವು ತೋರಿ
ನನ್ನ ಇರವನ್ನೇ ಮುಚ್ಚಿ ಬಿಡುತ್ತಾನೆ

ಸಿಹಿಮುದ್ದು ನೀಡಿದರು
ಕಡೆಗೆ ಬೆಲ್ಲದುಂಡೆಯನೆ
ಬಾಯೊಳಗೆ ತುರುಕಿ
ಮಂತ್ರ ಹಾಕುತ್ತಾನೆ
ಮೋಡಿ ಮಾಡುತ್ತಾನೆ
ಈ ಮಂತ್ರ-ಮೋಡಿಗಳ ಮದ್ದಿನಲ್ಲಿ
ನಾ, ಮುಂಪರಿಗೆ ಜಾರಿ
ಎಲ್ಲೋ, ಕಳಚಿಕೊಳ್ಳುತ್ತೇನೆ.

ನಿರ್ಮಲಾ ಆನವಟ್ಟಿ.

ಸುದ್ದಿ ಸಂಕಲನ

ಆತಂಕ ಒಡ್ಡುತ್ತಿರುವ ಗರ್ಭಪಾತಗಳು

ಇಡೀ ವಿಶ್ವದಲ್ಲಿ ಪ್ರತಿ ವರ್ಷ ೫೦ದಶಲಕ್ಷ ಮಹಿಳೆಯರು ಗರ್ಭಪಾತಕ್ಕೊಳಗಾಗುತ್ತಾರೆ. ಸಾಮಾಜಿಕ ಕಾನೂನಿನ ಮಿತಿಯ ಮಧ್ಯೆಯೂ ಸಮಾಜದ ಎಲ್ಲಾ ವರ್ಗಗಳ ಎಲ್ಲ ವಯಸ್ಸಿನವರು ಗರ್ಭಪಾತಕ್ಕೊಳಗಾಗುತ್ತಾರೆ—ಎಂಬ ಅಂಶವನ್ನು ೧೩ ನೇ ಪ್ರಸೂತಿ ಮತ್ತು ಸ್ತ್ರೀ ರೋಗ ಸಮ್ಮೇಳನದಲ್ಲಿ ವ್ಯಕ್ತಪಡಿಸಲಾಯ್ತು. ಈ ಸಮ್ಮೇಳನದಲ್ಲಿ ಭಾರತವೂ ಸೇರಿ ಒಟ್ಟು ೮೬ ದೇಶಗಳು ಭಾಗವಹಿಸಿದೆ.

ದಕ್ಷಿಣ ಅಮೆರಿಕಾದ ರಾಜ್ಯಗಳಲ್ಲಿ ಅಕ್ರಮ ಗರ್ಭಪಾತ ಪ್ರಕರಣಗಳಲ್ಲಿ ಶೇ ೫೦ ಸಾವು ಸಂಭವಿಸುತ್ತದೆ. ಪ್ರಪಂಚಾದ್ಯಂತ ಪ್ರತಿ ವರ್ಷ ೨ ಲಕ್ಷ ಮಂದಿ ಸಾವನ್ನಪ್ಪುತ್ತಾರೆ, ಎಂದಿರುವ ವಿಶ್ವ ಆರೋಗ್ಯ ಸಂಸ್ಥೆ ಗರ್ಭಪಾತವನ್ನು ಕುಟುಂಬ ಕಲ್ಯಾಣ ಕ್ರಮವಾಗಿ ಬೆಳೆಸಬಾರದು ಎಂದೂ ಅಭಿಪ್ರಾಯಪಟ್ಟಿದೆ.

ಬೇಲಿಯೇ ಹೊಲ ಮೇದಂತೆ

ಮಕ್ಕಳಲ್ಲಿ ನೈತಿಕ ಶಕ್ತಿ ಬೆಳೆಯುವಂತೆ ಮಾರ್ಗದರ್ಶಕರಾಗಿರಬೇಕಿದ್ದ ಶಿಕ್ಷಕರೇ ಹಾದಿ ತಪ್ಪಿದರೆ ಮಕ್ಕಳನ್ನು ತಿದ್ದುವವರಾರು? ಮಹಾರಾಷ್ಟ್ರದ ಗೋರೆಗಾಂವ್ ಮುನಿಸಿಪಲ್ ಪ್ರೌಢ ಶಾಲೆಯ ಶಿಕ್ಷಕ ಜೈ ಕೃಷ್ಣ ರಾಮನಾಥ್‌ವರ್ಮ ಶಾಲೆಯ ವಿರಾಮದ ವೇಳೆ ವಿದ್ಯಾರ್ಥಿನಿಯನ್ನು ಕೊಠಡಿಯೊಂದಕ್ಕೆ ಕರೆದುಕೊಂಡು ಹೋಗಿ ಅತ್ಯಾಚಾರ ಮಾಡಿದ್ದಾಗಿ ವರದಿಯಾಗಿದೆ.

೩ ನೇ ತರಗತಿಯಲ್ಲಿ ಓದತ್ತಿರುವ ೯ ವರ್ಷದ ಬಾಲಕಿ ಮನೆಯಲ್ಲಿ ಕಿಬ್ಬೊಟ್ಟೆ ನೋವು ಎಂದಾಗ ಅವಳನ್ನು ದವಾಖಾನೆಗೆ ಕರೆದೊಯ್ಯಲಾಯಿತು. ಅಲ್ಲಿ ಆಕೆಗೆ ರಕ್ತಸ್ರಾವವಾಗುತ್ತಿದ್ದುದು ಕಂಡು ಬಂದಿತು. ನಂತರ ಅತ್ಯಾಚಾರ ಎಸಗಿದ ಆರೋಪದ ಮೇಲೆ ಆ ಶಿಕ್ಷಕನನ್ನು ಪೊಲೀಸರು ಬಂಧಿಸಿದ್ದಾರೆ.

ಚೀನದ ಗೌರವ ಪಡೆದ ಭಾರತದ ಓಟಗಾರ್ತಿ

೧೯೯೧ ರಲ್ಲಿ ಏಷ್ಯಾದ ಹತ್ತು ಶ್ರೇಷ್ಠ ಅಥ್ಲೀಟ್‌ಗಳ ಪೈಕಿ ಶೈನಿ ವಿಲ್ಸನ್ ಅವರೂ ಒಬ್ಬರು ಎಂದು ಚೀನಾ ದೇಶದ ಕ್ರೀಡಾ ಬರಹಗಾರರ ಸಂಸ್ಥೆ ಆಯ್ಕೆ ಮಾಡಿದೆ. ಉಳಿದ ಒಂಬತ್ತು ಅಥ್ಲೀಟ್‌ಗಳಲ್ಲಿ ಚೀನಾ, ಕೊರಿಯ, ಜಪಾನ್ ಮತ್ತು ಕತಾರ್ ದೇಶದವರು ಇದ್ದಾರೆ. ಈ ಪ್ರತಿಷ್ಠಿತ ಗೌರವ ಗಳಿಸಿದ ಶೈನಿ ದಕ್ಷಿಣ ಚೀನಾದ ಕ್ಯಾಂಟ್‌ನ ಮೂಲದ ಯೋಜನಾ ಸಂಸ್ಥೆ ಪ್ರಾಯೋಜಿತ ಟ್ರೋಫಿಯನ್ನು ಪಡೆಯಲಿದ್ದಾರೆ.

ಭಾರತದ ಮಧ್ಯಮ ವೇಗದ ಓಟಗಾರ್ತಿಯಾಗಿರುವ ಶೈನಿ ಕಳೆದ ವರ್ಷ ಕೌಲಾಲಂಪುರದಲ್ಲಿ ನಡೆದ ಏಷ್ಯಾ ಟ್ರ್ಯಾಕ್ ಮತ್ತು ಫೀಲ್ಡ್ ಕೂಟದಲ್ಲಿ ಎರಡು ಚಿನ್ನದ ಪದಕಗಳನ್ನೂ ಮತ್ತು ಒಂದು ರಜತ ಪದಕವನ್ನೂ ಗೆದ್ದಿದ್ದರು.

ಸಂಪಾದಕಿ, ಪ್ರಕಾಶಕರು ಹಾಗೂ ಮುದ್ರಕರು ಎಚ್. ಎಸ್ ರಾಜೇಶ್ವರಿ, ಮಾನವಿ ಮುದ್ರಣಾಲಯ, ಪಂಚಾಯಿತಿ ರಸ್ತೆ, ಕಾಡುಗೋಡಿ ಅಂಚೆ, ಬೆಂಗಳೂರು—೫೬೦೦೬೭

REGD No KRNA 271

ಮಾನಸ

ಮಹಿಳೆಯರ ಮೇಲೆ ನಡೆಯುವ ಅಮಾನವೀಯ ದೌರ್ಜನ್ಯ, ಹಿಂಸೆಗಳನ್ನು ಬೆಳಕಿಗೆ ತರುವುದಕ್ಕಾಗಿ.

ಶೋಷಿತ ವ್ಯವಸ್ಥೆಯನ್ನು, ಅದರ ವಿವಿಧ ರೂಪಗಳನ್ನು ಗುರುತಿಸುವುದಕ್ಕಾಗಿ

ಮಹಿಳೆಯರೊಂದಿಗೆ ಆತ್ಮೀಯ ಅರ್ಥಪೂರ್ಣ ಸಂವಾದಕ್ಕಾಗಿ.

ಮಹಿಳಾ ಆಂದೋಲನದ ಹೊಸ ದಿಕ್ಕುಗಳ ಹುಡುಕಾಟಕ್ಕಾಗಿ.

PRINTED MATTER



C. G. Manjula
9, 3rd Cross.
Markham Road
Ashoka nagar.
Bangalore - 560025

ವಿಳಾಸ : "ಮಾನಸ"
ಪಂಚಾಯಿತಿ ರಸ್ತೆ
ಕಾಡುಗೋಡಿ
ಬೆಂಗಳೂರು—560067